# ವಿಧಾನ ಸೌಧದಲ್ಲಿ ಮಕ್ಕಳಿದ್ದಾರೆಯೆ?

-ಒಂದು ವಿಶ್ಲೇಷಣೆ

## 2020–2021
## ವಿಧಾನಮಂಡಲ ಅಧಿವೇಶನದ
## ಪ್ರಶ್ನೋತ್ತರಗಳ ವಿಶ್ಲೇಷಣೆ


**ಸಂಪಾದಕರು**

ವಾಸುದೇವ ಶರ್ಮಾ ಎನ್.ವಿ.
ಸತೀಶ್ ಜಿ.ಸಿ.
ನಾಗಸಿಂಹ ಜಿ. ರಾವ್
ಕಳಕಪ್ಪ ಬಿ.ಎಸ್.
ಸೋಮಶೇಖರ್ ಹೆಚ್.
ದಿವ್ಯ ವೈ.ಜಿ.
ಅಮೃತ

**ಸಲಹೆಗಾರರು**

ಡಾ. ಪದ್ಮಿನಿ
ಆನ್ಸೆಲಂ ರೋಜಾರಿಯೊ



KCRO
KARNATAKA CHILD RIGHTS OBSERVATORY

WORLD CHILDREN'S DAY NOVEMBER 20

**Are there Children in Vidhana Soudha?**

**Edited and Published by**

**Karnataka Child Rights Observatory (KCRO)**
**CRT – Child Rights Trust**
4606, 6th Floor, High Point IV,
Palace Road, Bengaluru – 560 001
Tel: 080 – 22201098
email: kcronodalcrt@gmail.com; web : www.kcro.in

ಮೊದಲ ಆವೃತ್ತಿ : 2021

ಪ್ರತಿಗಳು :

ಹಕ್ಕುಗಳನ್ನು ಕಾದಿರಿಸಲಾಗಿಲ್ಲ. ವಿಶ್ಲೇಷಣೆಯ ವಿಚಾರಗಳನ್ನು ಉಲ್ಲೇಖಿಸುವವರು
ಈ ಪ್ರಕಟಣೆಯ ವಿವರಗಳನ್ನು ಸ್ಮರಿಸಲು ಕೋರುತ್ತೇವೆ.

ಸಹಾಯ : ವೆಂಕಟೇಶ್ ಟಿ., ನಾಗಮಣಿ ಸಿ.ಎನ್, ಕೌಶಿಕ್, ಸೌಮ್ಯ
ಮತ್ತು ಪ್ರಿಯಾಂಕ

ಪ್ರಕಾಶಕರು : ಕರ್ನಾಟಕ ಮಕ್ಕಳ ಹಕ್ಕುಗಳ ನಿಗಾ ಕೇಂದ್ರ
ಚೈಲ್ಡ್ ರೈಟ್ಸ್ ಟ್ರಸ್ಟ್
4606, 6ನೇ ಮಹಡಿ
ಹೈ ಪಾಯಿಂಟ್ 4, ಅರಮನೆ ರಸ್ತೆ
ಬೆಂಗಳೂರು  01, ದೂರವಾಣಿ : 080 – 22201098
Mail : kcrnodalcrt@gmail.com, web : www.kcro.in

ನೆರವು : ಯುನಿಸೆಫ್, ಹೈದರಾಬಾದ್

# ವಿಧಾನಸೌಧದಲ್ಲಿ ಮಕ್ಕಳಿದ್ದಾರೆಯೇ ?

ಪುಟ ಸಂಖ್ಯೆ


| | | |
|---|---|---|
| **ಅಧ್ಯಾಯ 1** | | |
| **1.1.** | ಕರ್ನಾಟಕ ವಿಧಾನಸಭೆ ಮತ್ತು ವಿಧಾನಪರಿಷತ್ತಿನಲ್ಲಿ ಮಕ್ಕಳ ಮಾತು | **3** |
| **1.2.** | ಮಕ್ಕಳು ಮತ್ತು ಶಾಸಕರು | **4** |
| **1.3.** | ವಿಶ್ಲೇಷಣೆಯ ಉದ್ದೇಶಗಳು | **4** |
| **1.4.** | ವಿಶ್ಲೇಷಣೆಯ ಅವಧಿ | **4** |
| **ಅಧ್ಯಾಯ 2** | | |
| **ವಿಶ್ಲೇಷಣೆ** | | |
| **2.1.** | **2020–21ರ ವಿಧಾನಮಂಡಲ ಅಧಿವೇಶನಗಳು – ವಿಶ್ಲೇಷಣೆ** | **5** |
| **2.2.** | ಒಟ್ಟು ಪ್ರಶ್ನೆಗಳು – ವಿಧಾನಸಭೆ ಮತ್ತು ವಿಧಾನಪರಿಷತ್ | **7** |
| **2.3.** | ಮಕ್ಕಳ ಕೇಂದ್ರಿತ ಪ್ರಶ್ನೆಗಳು | **9** |
| **2.4.** | ವಿಭಾಗವಾರು ಮಕ್ಕಳ ಕೇಂದ್ರಿತ ಪ್ರಶ್ನೆಗಳು | **11** |
| **2.5.** | ಜಿಲ್ಲಾವಾರು ಪ್ರಶ್ನೆಗಳು | **12** |
| **2.6.** | ಕ್ಷೇತ್ರಾವಾರು ಪ್ರಶ್ನೆಗಳು | **12** |
| **2.7.** | ಜಿಲ್ಲಾವಾರು ಒಟ್ಟು ಪ್ರಶ್ನೆಗಳು ಮತ್ತು ಮಕ್ಕಳ ಕೇಂದ್ರಿತ ಪ್ರಶ್ನೆಗಳು | **13** |
| **2.8.** | ಕ್ಷೇತ್ರವಾರು ಪ್ರಶ್ನೆಗಳು – ವಿಧಾನಸಭೆ | **14** |
| **2.9.** | ಕ್ಷೇತ್ರವಾರು ಪ್ರಶ್ನೆಗಳು – ವಿಧಾನಪರಿಷತ್ | **20** |
| **2.10.** | ಸದಸ್ಯವಾರು ಪ್ರಶ್ನೆಗಳು – ವಿಧಾನಪರಿಷತ್ | **21** |
| **ಅನುಬಂಧಗಳು** | | |
| **ಅನುಬಂಧ – 1 :** | ವಿಧಾನಸಭೆಯಲ್ಲಿ ಕೇಳಿ ಬಂದ ಮಕ್ಕಳ ಕೇಂದ್ರಿತ ಆಯ್ದ ಪ್ರಶ್ನೆಗಳು ಮತ್ತು ಉತ್ತರಗಳು | **24** |
| **ಅನುಬಂಧ – 2 :** | ವಿಧಾನಪರಿಷತ್‌ನಲ್ಲಿ ಕೇಳಿ ಬಂದ ಮಕ್ಕಳ ಕೇಂದ್ರಿತ ಆಯ್ದ ಪ್ರಶ್ನೆಗಳು ಮತ್ತು ಉತ್ತರಗಳು | **29** |

## ಕರ್ನಾಟಕ ಮಕ್ಕಳ ಹಕ್ಕುಗಳ ನಿಗಾ ಕೇಂದ್ರದ ಸಲಹಾ ಸಮಿತಿಯ ಸದಸ್ಯರು

| | |
|---|---|
| **ಡಾ. ಹೆಚ್. ಸುದರ್ಶನ್**<br>ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ | **ಶ್ರೀಮತಿ ಅರ್ಚನಾ ಮೆಹಂದಾಲೆ**<br>ಅಭಿವೃದ್ಧಿ ಸಮಾಲೋಚಕರು |
| **ಶ್ರೀಮತಿ ಇ.ವಿ. ಶಾಂತಾ**<br>ಅಭಿವೃದ್ಧಿ ಸಮಾಲೋಚಕರು | **ಶ್ರೀ ಮಾಥ್ಯೂ ಫಿಲಿಪ್ಸ್**<br>ನಿರ್ದೇಶಕರು, ಸಿಕ್ರಂ, ಬೆಂಗಳೂರು |
| **ಶ್ರೀಮತಿ ಶ್ರೀಲಕ್ಷ್ಮಿ ಗುರುರಾಜ**<br>ಅಭಿವೃದ್ಧಿ ಸಮಾಲೋಚಕರು | **ಡಾ. ಟಿ.ಎಸ್. ಚಂದ್ರಶೇಖರ್**<br>ಮಾಜಿ ಪ್ರಾಧ್ಯಾಪಕರು, ಸಮಾಜಕಾರ್ಯ ವಿಭಾಗ<br>ಕ್ರಿಸ್ತು ಜಯಂತಿ ಕಾಲೇಜ್ ಮತ್ತು<br>ಮಾಜಿ ಉಪ ನಿರ್ದೇಶಕರು, ನಿಪ್ಸಿಡ್ |
| **ಡಾ. ಉಷಾ ಅಬ್ರೋಲ್**<br>ಮಾಜಿ ನಿರ್ದೇಶಕರು, ನಿಪ್ಸಿಡ್ | **ಶ್ರೀ ಲಕ್ಷ್ಮಾಪತಿ**<br>ನಿರ್ದೇಶಕರು, ಅಪ್ಸಾ ನಮ್ಮನೆ, ಬೆಂಗಳೂರು |
| **ಡಾ. ನಂದಿನಿ ಮುಂಡ್ಕುರ್**<br>ಬೆಂಗಳೂರು ಮಕ್ಕಳ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ | **ಶ್ರೀಮತಿ ಶೀಲಾ ದೇವರಾಜ್**<br>ನಿರ್ದೇಶಕರು, ಅಪ್ಸಾ, ಬೆಂಗಳೂರು |
| **ಡಾ. ಆಶಾ ಬೆನಕಪ್ಪ**<br>ನಿರ್ದೇಶಕರು, ಇಂದಿರಾಗಾಂಧಿ ಮಕ್ಕಳ ಆಸ್ಪತ್ರೆ, ಬೆಂಗಳೂರು | **ಶ್ರೀಮತಿ ವಾಣಿ ಪೆರಿಯೋಡಿ**<br>ಅಭಿವೃದ್ಧಿ ಸಲಹೆಗಾರರು |
| **ಶ್ರೀಮತಿ ನೀನಾ ನಾಯಕ್**<br>ಮಾಜಿ ಅಧ್ಯಕ್ಷರು,<br>ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ<br>ಮಾಜಿ ಸದಸ್ಯರು,<br>ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ | **ಫಾ ಜಾಯ್ ನೆಡುಂಪರಂಬಿಲ್**<br>ಕಾರ್ಯಕಾರಿ ನಿರ್ದೇಶಕರು<br>ಬ್ರೆಡ್ಸ್, ಡಾನ್‌ಬಾಸ್ಕೋ, ಬೆಂಗಳೂರು |
| **ಶ್ರೀಮತಿ ತಾರಾ**<br>ಮಾಜಿ ನಿರ್ದೇಶಕರು, ನಿಪ್ಸಿಡ್ | |

## 1.1. ಕರ್ನಾಟಕ ವಿಧಾನಸಭೆ ಮತ್ತು ವಿಧಾನ ಪರಿಷತ್‌ನಲ್ಲಿ ಮಕ್ಕಳ ಮಾತು

'ಮಕ್ಕಳು ಪ್ರಜೆಗಳು'. ಮಕ್ಕಳನ್ನು ಕುರಿತು ಆರಂಭವಾಗುವ ಎಲ್ಲ ಮಾತುಗಳು, ಚಿಂತನೆಗಳು ಮತ್ತು ಕಾರ್ಯಕ್ರಮಗಳು ಈ ಮೂಲಭೂತ ವಿಚಾರದಿಂದಲೇ ಆರಂಭವಾಗಬೇಕು. ದುರಾದೃಷ್ಟವಶಾತ್ ಅದೇಕೋ ಏನೋ ಮಕ್ಕಳ ಹಕ್ಕುಗಳ ಈ ಯುಗದಲ್ಲೂ, ಬಹುತೇಕರು ಮಕ್ಕಳು ಮುಂದಿನ ಪ್ರಜೆಗಳು, ನಾಳಿನ ನಾಗರೀಕರು ಎನ್ನುತ್ತಾ ಮಕ್ಕಳಿಗೆ ಹುಟ್ಟಿನಿಂದಲೇ ಇರುವ ಸಾಂವಿಧಾನಿಕ ಹಕ್ಕುಗಳನ್ನು ಮರೆಮಾಚಿಬಿಡುತ್ತಾರೆ. ನಾಳಿನ ಪ್ರಜೆಗಳು, ಮುಂದಿನ ನಾಗರೀಕರು ಎನ್ನುವುದರಲ್ಲಿ ಉದಾತ್ತವಾದ ಚಿಂತನೆಯಿದ್ದರೂ, ಮಕ್ಕಳಿಗೆ ಸಂಬಂಧಿಸಿದ ಕರ್ತವ್ಯಗಳನ್ನು, ಯೋಜನೆಗಳನ್ನು ಕಲ್ಪಿಸಿಕೊಳ್ಳುವವರು, ನಿರ್ವಹಿಸುವವರು ಮತ್ತು ಪ್ರತಿನಿಧಿಸುವವರು ಮಕ್ಕಳ ಪ್ರಸಕ್ತ ಸಾಂವಿಧಾನಿಕದತ್ತವಾದ 'ಪ್ರಜೆ' ಸ್ಥಾನಮಾನವನ್ನು ಮರೆತು ನಾಳಿನ ಪ್ರಜೆ ಎಂದು ತಪ್ಪಾಗಿ ಭಾವಿಸುವುದು ಈಗಲೂ ಬಹಳ ಸಾಮಾನ್ಯವಾಗಿದೆ.

ಇತ್ತೀಚೆಗೆ ಮಕ್ಕಳೂ ಸಹ 'ಹಕ್ಕುಗಳಿರುವ ಪ್ರಜೆಗಳು' ಎನ್ನುವುದನ್ನು ಪರಿಗಣಿಸುವವರು ಅಲ್ಲಲ್ಲಿ ತಮ್ಮ ದನಿ ತೋರುತ್ತಿರುವುದು ಗಮನಾರ್ಹ. ಭಾರತ ದೇಶದಲ್ಲಿ 18 ವರ್ಷದೊಳಗಿನ ಪ್ರಜೆಗಳ ಪಾಲು ಪ್ರತಿಶತ 39. ಕರ್ನಾಟಕದಲ್ಲಿ ಇದು ಶೇ.34 ಇದರಲ್ಲಿ ಗ್ರಾಮೀಣ ಮಕ್ಕಳ ಪಾಲು ಶೇ. 63. ನಗರ ಮತ್ತು ಗ್ರಾಮೀಣ ಮಕ್ಕಳ ಪರಿಸ್ಥಿತಿ ಹೇಗಿದೆ ಎಂದು ತಿಳಿದುಕೊಳ್ಳುವುದು ಒಂದು ಮುಖ್ಯವಾದ ವಿಚಾರವಾಗಿದೆ. 2015ರಲ್ಲಿ ಕರ್ನಾಟಕ ರಾಜ್ಯ ಸರ್ಕಾರ ರಾಜ್ಯದ ಎಲ್ಲ ಗ್ರಾಮಪಂಚಾಯಿತಿಗಳಿಗೆ ಅನ್ವಯಿಸಿ ಅಭಿವೃದ್ಧಿ ಸೂಚಕಗಳನ್ನು ಆಧರಿಸಿ ಪಟ್ಟಿಯೊಂದನ್ನು ಬಿಡುಗಡೆ ಮಾಡಿದೆ. ಅದರಂತೆ ಶೇ.50ಕ್ಕೂ ಹೆಚ್ಚು ಗ್ರಾಮಪಂಚಾಯಿತಿಗಳು ರಾಜ್ಯದ ಸರಾಸರಿಗಿಂತಲೂ ಹಿಂದುಳಿದಿವೆ. ಈ ಪಟ್ಟಿಯನ್ನು ಮಾಡಲು ತೆಗೆದುಕೊಂಡಿರುವ ಆಧಾರ ಸೂಚಕಗಳಲ್ಲಿ ಬಹಳಷ್ಟು ಮಕ್ಕಳಿಗೆ ಸಂಬಂಧಿಸಿರುವುದೇ ಆಗಿವೆ. ಇದರ ಜೊತೆಗೆ 2016ರಲ್ಲಿ ವಿಶ್ವಸಂಸ್ಥೆಯು ಜಾರಿಗೆ ತಂದಿರುವ ಸುಸ್ಥಿರ ಅಭಿವೃದ್ಧಿ ಗುರಿಗಳಲ್ಲಿಯೂ ಸಹ ಮಕ್ಕಳಿಗೆ ಸಂಬಂಧಿಸಿದ ಹಲವಾರು ಸೂಚಕಗಳಿಗೆ ಮತ್ತು ಇವುಗಳನ್ನು 2030ರೊಳಗೆ ಸಾಧಿಸಬೇಕಿದೆ.

ಕಳೆದ ಎರಡು ವರ್ಷಗಳಲ್ಲಿ ಇಡೀ ವಿಶ್ವವೇ ಕೊರೋನಾ ಸಂಕ್ರಾಮಿಕದಿಂದ ನಲುಗಿದೆ. ಅದರಲ್ಲೂ ಮಕ್ಕಳ ಶಿಕ್ಷಣ, ಆರೋಗ್ಯ, ಪೌಷ್ಠಿಕತೆ, ರಕ್ಷಣೆ ಇವೇ ಮೊದಲಾದ ವಿಚಾರಗಳ ಹಕ್ಕುಗಳಿಂದ ಮಕ್ಕಳು ವಂಚಿತರಾಗಿರುವುದು ಸ್ಪಷ್ಟ. ಹಾಗಾಗಿ ವಿಧಾನಮಂಡಲ ಅಧಿವೇಶನದ ಉಭಯ ಮಂಡಲದ ಸದನಗಳಲ್ಲಿ ಯಾವ ರೀತಿಯ ಮಕ್ಕಳ ಕೇಂದ್ರಿತ ಪ್ರಶ್ನೆಗಳ ಕೇಳಿಬಂದಿವೆ ಎಂಬುದು ಬಹಳ ಮುಖ್ಯವಾಗುತ್ತದೆ. ಹಾಗಾಗಿ ಈ ಪೀಠಿಕೆ.

ಇದರ ಜೊತೆಗೆ 2008ರಿಂದ ಪ್ರಾರಂಭವಾಗಿ ಹಲವಾರು ಮಕ್ಕಳ ಕುರಿತಾದ ವಿಚಾರಗಳ ಮೇಲೆ ಚರ್ಚಿಸುತ್ತಿದ್ದ 'ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳಿಗಾಗಿ ಶಾಸಕರ ವೇದಿಕೆ'ಯ ಸಭೆಯು ಕೊರೋನಾ, ರಾಜಕೀಯ ಪಲ್ಲಟ ಇವೇ ಮೊದಲಾದ ಕಾರಣಗಳಿಂದ ನಡೆದಿಲ್ಲ. ಇದಕ್ಕೆ ಮರುಚಾಲನೆ ನೀಡುವ ಭರವಸೆಯನ್ನು ವಿಧಾನಪರಿಷತ್ತಿನ ಸಭಾಪತಿಗಳಾದ ಶ್ರೀ ಬಸವರಾಜ ಹೊರಟ್ಟಿರವರು ಇತ್ತೀಚೆಗೆ ನೀಡಿದ್ದಾರೆ. ಇದು ರಾಜ್ಯದಲ್ಲಿ ಮಕ್ಕಳ ಹಕ್ಕುಗಳನ್ನು ಎತ್ತಿಹಿಡಿಯುವ ನಿಟ್ಟಿನಲ್ಲಿ ಗಮನಾರ್ಹ ಹೆಜ್ಜೆಯಾಗಲಿದೆ.

ವಿಧಾನ ಸಭೆ ಮತ್ತು ಪರಿಶತ್ತಿನ ಪ್ರಶ್ನೋತ್ತರಗಳ ವಿಶ್ಲೇಷಣೆ ನಡೆಸಿರುವ ನಾವು ಕಳೆದ ಹದಿನೈದು ವರ್ಷಗಳಿಂದಲೂ ಎದುರು ನೋಡುತ್ತಿರುವುದು, ಇತರ ಕ್ಷೇತ್ರಗಳ ತಜ್ಞರೂ ಕೂಡಾ ಪ್ರಶ್ನೋತ್ತರಗಳ ವಿಶ್ಲೇಷಣೆಯನ್ನು ಆಯಾ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ನಡೆಸಿದರೆ, ರಾಜ್ಯದ ಒಟ್ಟೂ ಅಭಿವೃದ್ಧಿಯನ್ನು ಕುರಿತು ಆಗುತ್ತಿರುವ ಚರ್ಚೆಯತ್ತ ಕ್ಷಕಿರಣ ಬೀರಿದಂತಾಗುತ್ತದೆ ಎಂದು. ಈ ಪ್ರಕ್ರಿಯೆಯಲ್ಲಿ ನಾವೇ ಕಂಡುಕೊಂಡಿರುವ ವಿಶ್ಲೇಷಣಾ ವಿಧಾನವನ್ನು ಹಂಚಿಕೊಳ್ಳಲು ನಾವು ಸದಾ ಸಿದ್ಧ.

ಇನ್ನೊಂದು ಸಂತೋಷದ ವಿಚಾರವೆಂದರೆ ಸರ್ಕಾರ ವಿಧಾನಮಂಡಲ ಅಧಿವೇಶನಗಳಲ್ಲಿ ಮಂಡನೆಯಾಗುವ ಪ್ರಶ್ನೋತ್ತರಗಳು ಈಗ ಸುಲಭವಾಗಿ ಎಲ್ಲರಿಗೂ ಸಿಗುತ್ತಿದೆ. ಹಿಂದಿನ ವರ್ಷಗಳಲ್ಲಿ ವಿಧಾನಮಂಡಲ ಅಧಿವೇಶನಗಳಲ್ಲಿ ನಡೆಯುವ ಪ್ರಶ್ನೆಗಳು ಮಾತ್ರ ಅಂತರ್ಜಾಲ ತಾಣದಲ್ಲಿ ಲಭ್ಯವಾಗುತ್ತಿತ್ತು. ಆದರೆ ಇದೀಗ ಅವುಗಳಿಗೆ ಸರ್ಕಾರ ನೀಡಿರುವ ಉತ್ತರಗಳೂ ಸಹ ಅಂತರ್ಜಾಲ ತಾಣದಲ್ಲಿ ಲಭ್ಯವಾಗುತ್ತಿವೆ. ಇದು ಸ್ವಾಗತಾರ್ಹ. ಆದರೆ ಈ ಅಂತರ್ಜಾಲವನ್ನು ಇನ್ನು ಹೆಚ್ಚು ಬಳಕೆದಾರರ ಸ್ನೇಹಿಯನ್ನಾಗಿಸುವ ಪ್ರಯತ್ನಗಳಾಗಬೇಕಿದೆ.

ಈ ವಿಶ್ಲೇಷಣೆಯಲ್ಲಿ ಪ್ರತಿಯೊಬ್ಬ ಶಾಸಕರನ್ನು ಅವರವರ ಕ್ಷೇತ್ರ ಮತ್ತು ಜಿಲ್ಲೆ ಹಾಗೂ ಆಡಳಿತ ವಿಭಾಗದಡಿಯಲ್ಲಿ ವಿಂಗಡಿಸಿ ಅವರು ಕೇಳಿರುವ ಒಟ್ಟು ಪ್ರಶ್ನೆಗಳು ಮತ್ತು ಮಕ್ಕಳ ವಿಚಾರದಲ್ಲಿ ಅವರು ಕೇಳಿರುವ ಪ್ರಶ್ನೆಗಳ ಸಂಖ್ಯೆಯನ್ನೂ ನೀಡಲಾಗಿದೆ. ಅದೇ ರೀತಿ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಕೇಳಿರುವ ಒಟ್ಟು ಪ್ರಶ್ನೆಗಳು ಮತ್ತು ವಿವಿಧ ಇಲಾಖೆಗಳು ಎದುರಿಸಿರುವ ಒಟ್ಟು ಪ್ರಶ್ನೆಗಳ ವಿವರಗಳನ್ನೂ ಈ ವಿಶ್ಲೇಷಣೆಯಲ್ಲಿ ನೀಡಲಾಗಿದೆ. ಇಂತಹದೊಂದು ವಿವರಣೆ ಮಕ್ಕಳ ಹಕ್ಕುಗಳನ್ನು ಕುರಿತು ತಮ್ಮ ಸಂಶೋಧನೆ, ವಕೀಲಿ ಮತ್ತು ಸಾರ್ವಜನಿಕ ಶಿಕ್ಷಣ ಕಾರ್ಯಕ್ರಮಗಳಿಗೆ ಉಪಯೋಗವಾಗುವುದೆಂದೂ ಮಕ್ಕಳ ಹಕ್ಕುಗಳನ್ನು ರಕ್ಷಿಸುವಲ್ಲಿ ಸಹಾಯಕವಾಗುವುದೆಂದು ನಾವು ನಂಬಿದ್ದೇವೆ.

ಮಕ್ಕಳ ಹಕ್ಕುಗಳ ನಿಗಾ ಕೇಂದ್ರದ ಕೆಲಸಗಳಿಗೆ ಒತ್ತಾಸೆಯಾಗಿರುವ ನಿಗಾ ಕೇಂದ್ರದ ಸದಸ್ಯ ಸಂಸ್ಥೆಗಳು, ವ್ಯಕ್ತಿಗಳು ಹಾಗೂ ಹಿತೈಶಿಗಳಿಗೆ ನಮ್ಮ ವಂದನೆಗಳು. ನಿಗಾ ಕೇಂದ್ರದ ಆಶಯಗಳಿಗೆ ಸದಾ ಕಾಲಕ್ಕೂ ಒತ್ತಾಸೆಯಾಗಿರುವ ವಿಧಾನ ಪರಿಷತ್ತಿನ ಸಭಾಪತಿಗಳು ಶ್ರೀ ಬಸವರಾಜ ಹೊರಟ್ಟಿರವರಿಗೂ ಮತ್ತು ಅವರ ಕಛೇರಿಯ ಸಿಬ್ಬಂದಿಗಳಿಗೂ, ನಿಕಟ ಪೂರ್ವ ವಿಧಾನ ಪರಿಷತ್ತಿನ ಸದಸ್ಯರಾದ ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ರವರಿಗೂ ಹಾಗು ಶ್ರೀ ಪ್ರಸೂನ್ ಸೇನ್, ಯುನಿಸೆಫ್, ಹೈದರಾಬಾದ್‌ರವರಿಗೂ ನಾವು ಆಭಾರಿಗಳು.

– **ಎನ್.ವಿ. ವಾಸುದೇವ ಶರ್ಮಾ,**
ರಾಜ್ಯ ಸಂಚಾಲಕ
ಕರ್ನಾಟಕ ಮಕ್ಕಳ ಹಕ್ಕುಗಳ ನಿಗಾ ಕೇಂದ್ರ

## 1.2. ಮಕ್ಕಳು ಮತ್ತು ಶಾಸಕರು

ಈ ಹಿಂದಿನ ಮೂರು ದಶಕಗಳಲ್ಲಿ ನಡೆದಿರುವ ಎಲ್ಲಾ ಹಂತದ (ಲೋಕಸಭಾ, ವಿಧಾನಸಭಾ ಮತ್ತು ಗ್ರಾಮ ಪಂಚಾಯಿತಿ) ಅನೇಕ ಚುನಾವಣೆಗಳಲ್ಲಿ ಹಲವಾರು ಸ್ವಯಂಸೇವಾ ಸಂಘಟನೆಗಳು ಮತ್ತು ಚಳವಳಿಗಳು ಮಕ್ಕಳಿಗಾಗಿ ರಾಜಕೀಯ ಪಕ್ಷಗಳು ಅರ್ಥಪೂರ್ಣವಾದ ಭರವಸೆಗಳನ್ನು ನೀಡಲೇಬೇಕೆಂದು ಒತ್ತಡ ಹಾಕುತ್ತಲೇ ಬಂದಿವೆ. ಅದರ ಫಲವಾಗಿ ವಿವಿಧ ರಾಜಕೀಯ ಪಕ್ಷಗಳು ತಮ್ಮ ಚುನಾವಣಾ ಪ್ರಣಾಳಿಕೆಗಳಲ್ಲಿ ಮಕ್ಕಳ ಸಂಬಂಧಿತವಾಗಿ ಅನೇಕ ಭರವಸೆಗಳನ್ನು ನೀಡಿವೆ. ಆದರೆ ಮಕ್ಕಳಿಗಿತ್ತ ಈ ಭರವಸೆಗಳ ಈಡೇರಿಕೆಗೆ ಪಕ್ಷಗಳು/ಜನಪ್ರತಿನಿಧಿಗಳು ಏನು ಪ್ರಯತ್ನ ಮಾಡುತ್ತಿದ್ದಾರೆ ಎಂಬುದನ್ನು ನೇರವಾಗಿ ಕಂಡುಕೊಳ್ಳಲು ಕಷ್ಟಸಾಧ್ಯ. ಆದರೆ 2005ರ ಕರ್ನಾಟಕ ವಿಧಾನಸಭಾ ಚುನಾವಣೆಯ ನಂತರ ರಾಜಕೀಯ ಪಕ್ಷಗಳು ಚುನಾವಣಾ ಪ್ರಣಾಳಿಕೆಗಳಲ್ಲಿ ಮಕ್ಕಳ ಹಕ್ಕುಗಳ ಕುರಿತಾಗಿ ನೀಡಿದ ಭರವಸೆಗಳ ಈಡೇರಿಕೆಗೆ ನಡೆಸುತ್ತಿರುವ ಪ್ರಯತ್ನಗಳನ್ನು ಕಂಡುಕೊಳ್ಳಲು ಚೈಲ್ಡ್ ರೈಟ್ಸ್ ಟ್ರಸ್ಟ್ ಸಂಸ್ಥೆಯು 2005ರ ವಿಧಾನಮಂಡಲದಲ್ಲಿ ಜನಪ್ರತಿನಿಧಿಗಳು ಮಕ್ಕಳನ್ನು ಕುರಿತಾಗಿ ಎತ್ತಿದ ಪ್ರಶ್ನೆಗಳು ಮತ್ತು ಅವುಗಳಿಗೆ ಬಂದ ಉತ್ತರಗಳ ವಿಶ್ಲೇಷಣೆಯನ್ನು ನಡೆಸಿ, ಪುಸ್ತಕದ ರೂಪದಲ್ಲಿ ಪ್ರಕಟಿಸಿ ಜನಪ್ರತಿನಿಧಿಗಳಿಗೆ ಮತ್ತು ಸಮುದಾಯಕ್ಕೆ ತಲುಪಿಸಿತ್ತು. ಇಂತಹ ವಿಶ್ಲೇಷಣೆ ಕರ್ನಾಟಕದಲ್ಲೊಂದು ಹೊಸ ಪ್ರಯತ್ನ. ನಮ್ಮ ಈ ಯತ್ನಕ್ಕೆ ಹಲವಾರು ಪ್ರೋತ್ಸಾಹಕ ಮಾತುಗಳು ಮತ್ತು ಪ್ರತಿಕ್ರಿಯೆ ವಿವಿಧೆಡೆಯಿಂದ ಬಂದಿತ್ತು.

ಹಾಗಾಗಿ 2008, 2013 ಮತ್ತು 2018ರ ಕರ್ನಾಟಕ ವಿಧಾನಸಭಾ ಮತ್ತು 2009, 2014 ಮತ್ತು 2019ರ ಲೋಕಸಭಾ ಚುನಾವಣೆಯಲ್ಲೂ ಸಹ ಇಂತಹದೇ ಪ್ರಯತ್ನ ನಡೆಸಿದ್ದಲ್ಲದೆ, ಈ ಪ್ರಯತ್ನದ ಅನುಸರಣೆಯಾಗಿ ಕರ್ನಾಟಕ ಮಕ್ಕಳ ಹಕ್ಕುಗಳ ನಿಗಾ ಕೇಂದ್ರದ ಸಂಚಾಲಕ ಸಂಸ್ಥೆಯಾದ ಚೈಲ್ಡ್ ರೈಟ್ಸ್ ಟ್ರಸ್ಟ್ ಸಂಸ್ಥೆಯು ಕರ್ನಾಟಕ ವಿಧಾನಮಂಡಲದ ಎಲ್ಲಾ ಅಧಿವೇಶನಗಳಲ್ಲಿ ಜನಪ್ರತಿನಿಧಿಗಳು ವಿಧಾನಸಭೆ ಮತ್ತು ವಿಧಾನಪರಿಷತ್ತಿನಲ್ಲಿ ಮಕ್ಕಳ ಹಕ್ಕುಗಳ ವಿಚಾರವನ್ನು ಕುರಿತು ಕೇಳಿರುವ ಪ್ರಶ್ನೆಗಳು ಮತ್ತು ಅದಕ್ಕೆ ಸಂಬಂಧಪಟ್ಟವರಿಂದ ಬಂದ ಉತ್ತರಗಳು, ಅದರಲ್ಲಿರುವ ಭಿನ್ನತೆಗಳು ಇವೇ ಮೊದಲಾದವುಗಳನ್ನು ಸಂಖ್ಯಾತ್ಮಕವಾಗಿ ಮತ್ತು ಗುಣಾತ್ಮಕವಾಗಿ ವಿಶ್ಲೇಷಿಸುವ ಪ್ರಯತ್ನ ನಡೆಸಿ 2005ರಿಂದಲೂ ಪ್ರಕಟಿಸುತ್ತಾ ಬರುತ್ತಿದೆ. ಈ ಪ್ರಕ್ರಿಯೆ ಈ ವರ್ಷವೂ ಸಹ ಮುಂದುವರೆದಿದೆ.

## 1.3. ವಿಧಾನ ಮಂಡಲದ ಉಭಯ ಸದನಗಳ ಪ್ರಶ್ನೋತ್ತರಗಳ ವಿಶ್ಲೇಷಣೆಯ ಉದ್ದೇಶಗಳು

- ವಿಧಾನಸಭೆಯ ಕಲಾಪಗಳಲ್ಲಿ ಮಕ್ಕಳ ವಿಚಾರಗಳನ್ನು ಕೇಂದ್ರೀಕರಿಸಿ ಎಷ್ಟು ಪ್ರಶ್ನೆಗಳು ಕೇಳಲ್ಪಟ್ಟವು? ಈ ಪ್ರಶ್ನೆಗಳು ಯಾವ ಸ್ವರೂಪದ್ದಾಗಿವೆ ಮತ್ತು ಯಾವ ಅವಧಿಯಲ್ಲಿ ಯಾವ ಶಾಸಕರು ಮಕ್ಕಳನ್ನು ಕೇಂದ್ರೀಕರಿಸಿದ ಪ್ರಶ್ನೆಗಳನ್ನು ಕೇಳುತ್ತಿದ್ದಾರೆ ಎಂದು ತಿಳಿದುಕೊಳ್ಳುವುದು.
- ಈ ರೀತಿ ಕೇಳಿ ಬಂದ ಪ್ರಶ್ನೆಗಳು ಎಷ್ಟರ ಮಟ್ಟಿಗೆ ಮಕ್ಕಳ ಹಕ್ಕುಗಳ ದೃಷ್ಟಿಕೋನವನ್ನು ಹೊಂದಿವೆ ಎಂದು ಪರೀಕ್ಷಿಸುವುದು.
- ಉಭಯ ಸದನಗಳ ಪ್ರಶ್ನೋತ್ತರ ಅಧಿವೇಶನಗಳನ್ನು ಮಕ್ಕಳ ಹಕ್ಕುಗಳ ದೃಷ್ಟಿಕೋನದಲ್ಲಿ ಒರೆ ಹಚ್ಚಿ, ಮಕ್ಕಳ ಹಕ್ಕುಗಳ ಜಾರಿಗಾಗಿ ದನಿ ಎತ್ತಲು ಒಂದು ಪ್ರಭಾವಿ ಗುಂಪನ್ನು ಎರಡೂ ಸದನಗಳಲ್ಲಿ ಅಭಿವೃದ್ಧಿಪಡಿಸಿ ಆ ಮೂಲಕ ವಿಧಾನ ಮಂಡಲದ ಉಭಯ ಸದನಗಳ ಕಲಾಪಗಳಲ್ಲಿ ಮಕ್ಕಳಿಗೆ ಸಂಬಂಧಿಸಿದಂತೆ ವಸ್ತುನಿಷ್ಠ ಪ್ರಶ್ನೆಗಳು ನಿರಂತರವಾಗಿ ಮೂಡಿ ಬರುವಂತೆ ನಿಗಾ ವಹಿಸುವುದು.
- ಮಕ್ಕಳ ಹಕ್ಕುಗಳಿಗೆ ಸಂಬಂಧಿಸಿದಂತೆ ವಿವಿಧ ರಾಜಕೀಯ ಪಕ್ಷಗಳು ನೀಡಿರುವ ಭರವಸೆಗಳನ್ನು ಈಡೇರಿಸಲು ರಾಜಕೀಯ ಪಕ್ಷಗಳ ಮನವೊಲಿಸಲು ಅಧಿಕೃತ ದಾಖಲೆಯ ಸೃಷ್ಟಿ.

**2020–21 ವಿಧಾನಮಂಡಲ ಅಧಿವೇಶನಗಳು**

| ವಿಧಾನಸಭೆ | | ವಿಧಾನಪರಿಷತ್ತು | |
|---|---|---|---|
| **ಅವಧಿ** | **ದಿನಗಳು*** | **ಅವಧಿ** | **ದಿನಗಳು*** |
| ಸೆಪ್ಟೆಂಬರ್ 21–30, 2020 | 8 | ಸೆಪ್ಟೆಂಬರ್ 21–30, 2020 | 8 |
| ಡಿಸೆಂಬರ್ 7–15, 2020 | 5 | ಡಿಸೆಂಬರ್ 7–15, 2020 | 5 |
| 29–1–2021 ರಿಂದ 5–2–2021 | 6 | 29–1–2021 ರಿಂದ 5–2–2021 | 6 |
| ಮಾರ್ಚ್ 4–31, 2021 | 17 | ಮಾರ್ಚ್ 4–31, 2021 | 17 |
| ಸೆಪ್ಟೆಂಬರ್ 13–24, 2021 | 10 | ಸೆಪ್ಟೆಂಬರ್ 13–24, 2021 | 10 |
| **ಒಟ್ಟು** | **37** | **ಒಟ್ಟು** | **37** |

* ರಜಾ ದಿನಗಳನ್ನು ಹೊರತುಪಡಿಸಿ

## 2.1. ಕರ್ನಾಟಕ ವಿಧಾನ ಮಂಡಲದ ಪ್ರಶ್ನೋತ್ತರ ಕಲಾಪಗಳ ವಿಶ್ಲೇಷಣಾ ವಿಧಾನ

ಈ ವಿಶ್ಲೇಷಣೆಯ ಮುಖ್ಯ ವಿಚಾರ ಚುನಾಯಿತ ಪ್ರತಿನಿಧಿಗಳು ಮಕ್ಕಳನ್ನು ಕುರಿತಂತೆ ವಿಧಾನ ಮಂಡಲದ ಉಭಯ ಸದನಗಳಲ್ಲಿ ಚರ್ಚಿಸುತ್ತಾರೇನು ಎಂದು ನೋಡುವುದೇ ಆಗಿದೆ. ಇದೆಲ್ಲದರ ಹಿಂದಿನ ಅಪೇಕ್ಷೆ ಮಕ್ಕಳ ಇಂದಿನ ಸ್ಥಿತಿಗತಿಗಳನ್ನು ಶಾಸಕರು ಗಣನೆಗೆ ತೆಗೆದುಕೊಂಡು, ಮಕ್ಕಳ ಬದುಕು, ರಕ್ಷಣೆ, ಅಭಿವೃದ್ಧಿ ಮತ್ತು ಭಾಗವಹಿಸುವಿಕೆ, ಮಕ್ಕಳಿಗೆ ಸಂಬಂಧಿಸಿದ ನೀತಿಗಳು, ಕಾಯಿದೆಗಳು, ಕಾರ್ಯಕ್ರಮಗಳು, ಯೋಜನೆಗಳು, ಸರ್ಕಾರದ ನಿಲುವುಗಳ ಮೇಲೆ ಪ್ರಭಾವ ಬೀರಿ ಗುಣಾತ್ಮಕವಾದ ಬದಲಾವಣೆಗಳು ಆಗುವಂತೆ ಮಾಡುತ್ತಿದ್ದಾರೋ ಇಲ್ಲವೋ ಎಂದು ಪರೀಕ್ಷಿಸುವುದು. ಇದಕ್ಕೆ ಮೂಲ ಕಾರಣ, ಇಂದಿನ ಪ್ರಜೆಗಳೆಂದು ಖಂಡಿತವಾಗಿಯೂ ಒಪ್ಪಲೇಬೇಕಾದ ಮಕ್ಕಳ ಸಂಖ್ಯೆ (ಭಾರತ ಸರ್ಕಾರ 1992ರಲ್ಲಿ ಸಹಿ ಹಾಕಿ ಒಪ್ಪಿರುವ ಮಕ್ಕಳ ಹಕ್ಕುಗಳ ಒಡಂಬಡಿಕೆಯಂತೆ ಮಕ್ಕಳೆಂದರೆ 18 ವರ್ಷದ ಒಳಗಿನವರು) ಭಾರತದ ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ 39 ಮತ್ತು ಕರ್ನಾಟಕದಲ್ಲಿ ಶೇಕಡಾ 34ರಷ್ಟಿದೆ (2011ರ ಜನಗಣತಿ).

### ಈ ವಿಶ್ಲೇಷಣೆಗೆ ನಾವು ತೆಗೆದುಕೊಂಡಿರುವ ಕೆಲವು ಮೂಲ ಪ್ರಶ್ನೆಗಳು:

- ಚುನಾಯಿತ ಪ್ರತಿನಿಧಿಗಳು ಮಕ್ಕಳು ಮತ್ತು ಮಕ್ಕಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಸದನ ಸಭೆಗಳಲ್ಲಿ ಚರ್ಚೆಗಾಗಿ ವಿಚಾರಗಳು, ಪ್ರಶ್ನೆಗಳನ್ನು ತೆಗೆದುಕೊಂಡಿದ್ದಾರೇನು?
- ಮಕ್ಕಳ ಯಾವ ವಿಷಯಗಳ ಬಗ್ಗೆ ಮತ್ತು ಯಾವ ಹಿನ್ನೆಲೆ, ಪರಿಸ್ಥಿತಿಯಲ್ಲಿರುವ ಮಕ್ಕಳ ಬಗ್ಗೆ ಸದನಗಳಲ್ಲಿ ಯಾವ ಶಾಸಕರು ಮತ್ತು ಇಡೀ ಶಾಸಕ ಸಮುದಾಯ ಮಕ್ಕಳ ಯಾವ ಸಮಸ್ಯೆಗಳ ಕುರಿತಾಗಿ ಮಾತನಾಡಿದ್ದಾರೆ?
- ಮಕ್ಕಳ ಸಂಬಂಧಿತವಾಗಿ ಶಾಸಕರೆತ್ತುವ ಪ್ರಶ್ನೆಗಳಿಗೆ ಸಂಬಂಧಪಟ್ಟ ಇಲಾಖೆಯಿಂದ ಎಂತಹ ಉತ್ತರ ಬರುತ್ತಿದೆ?
- ಮಕ್ಕಳಿಗೆ ಸಂಬಂಧಿಸಿದ ವಿಚಾರಗಳನ್ನು ಸದನದಲ್ಲಿ ಧ್ವನಿಸುವ ಜನಪ್ರತಿನಿಧಿಗಳು ಯಾರು ಯಾರು?
- ಮಕ್ಕಳನ್ನು ಕೇಂದ್ರೀಕರಿಸಿಕೊಂಡ ಪ್ರಶ್ನೆಗಳು ಸದನದಲ್ಲಿ ಪ್ರಾಮುಖ್ಯತೆಯನ್ನು ಪಡೆದಿವೆಯೇ? ಅವು ಜನರ ಮನಸ್ಸಿನಲ್ಲಿ ಉಳಿದಿವೆಯೇ?
- ಈ ರೀತಿ ಸದನಗಳಲ್ಲಿ ಧ್ವನಿಸಲಾದ ಪ್ರಶ್ನೆಗಳು, ಚರ್ಚೆಗಳ ವಿಚಾರಗಳು ಮಕ್ಕಳ ಬದುಕು, ರಕ್ಷಣೆ, ವಿಕಾಸ ಮತ್ತು ಭಾಗವಹಿಸುವಿಕೆ ಹಾಗೂ ಮಕ್ಕಳಿಗೆ ಸಂಬಂಧಿಸಿದ ನೀತಿ, ಕಾಯಿದೆ, ಕಾರ್ಯಕ್ರಮ, ಯೋಜನೆ, ಆಯ–ವ್ಯಯ ಇವುಗಳ ಮೇಲೆ ಎಂತಹ ಪರಿಣಾಮ ಬೀರಿವೆಯೆ?

### ವಿಶ್ಲೇಷಣೆಯ ಸಂದರ್ಭದಲ್ಲಿ ಕೈಗೊಂಡ ಕಾರ್ಯಚಟುವಟಿಕೆಗಳು

- ವಿಧಾನಮಂಡಲದ ಪ್ರಶ್ನೋತ್ತರ ವಿಭಾಗದ ಅಧಿಕಾರಿಗಳನ್ನು ಸಂಪರ್ಕಿಸಿ, ಈ ಅಧ್ಯಯನದ ವಿವರಗಳನ್ನು ನೀಡಿ, ವಿವಿಧ ಅಂಕಿ ಅಂಶಗಳು ಹಾಗೂ ಪ್ರಶ್ನೆ, ಉತ್ತರಗಳ ಸಂಗ್ರಹಣೆ.
- ಲಭ್ಯ ಮಾಹಿತಿಗಳ ವಿಶ್ಲೇಷಣೆ
- ಅಧಿವೇಶನಗಳಲ್ಲಿ ಕೇಳಿದ ಎಲ್ಲಾ ಪ್ರಶ್ನೆಗಳನ್ನು ಪರಿಗಣಿಸುವುದು ಮತ್ತು ವಿಂಗಡಣೆ
- ವಿವಿಧ ಇಲಾಖಾವಾರು, ಪಕ್ಷಾವಾರು ಒಟ್ಟು ಪ್ರಶ್ನೆಗಳ ವಿಂಗಡಣೆ
- ಮಕ್ಕಳ ಕೇಂದ್ರಿತ ಒಟ್ಟು ಪ್ರಶ್ನೆಗಳು, ಪಕ್ಷಾವಾರು ಮಕ್ಕಳ ಕೇಂದ್ರಿತ ಪ್ರಶ್ನೆಗಳು
- ಉಭಯ ಸದನಗಳಲ್ಲಿ ಕಂಡು ಬಂದ ಮಕ್ಕಳ ಕೇಂದ್ರಿತ ಪ್ರಶ್ನೆಗಳನ್ನು ಈ ಮುಂದಿನಂತೆ ವಿಂಗಡಿಸಿಕೊಳ್ಳಲಾಯಿತು:

– ಮಕ್ಕಳನ್ನು ಕುರಿತು ಪ್ರಶ್ನೆ ಕೇಳಿದ ಶಾಸಕರು;
– ಅಂತಹ ಶಾಸಕರು ಪ್ರತಿನಿಧಿಸುತ್ತಿರುವ ಮತ ಕ್ಷೇತ್ರ;
– ಈ ಶಾಸಕರು ಕಂಡುಕೊಂಡಿರುವ ರಾಜಕೀಯ ಪಕ್ಷ;
– ಈ ಶಾಸಕರು ಪ್ರತಿನಿಧಿಸುತ್ತಿರುವ ಜಿಲ್ಲೆ;
– ಅವರು ಕೇಳಿರುವ ಮಕ್ಕಳ ಕೇಂದ್ರಿತ ಪ್ರಶ್ನೆಗಳು ಯಾವ ಇಲಾಖೆಗೆ ಸಂಬಂಧಿಸಿದ್ದು;

- **ಸದಸ್ಯಾವಾರು ಮಕ್ಕಳ ಕೇಂದ್ರಿತ ಪ್ರಶ್ನೆಗಳು,** ಮಕ್ಕಳ ಕೇಂದ್ರಿತ ಪ್ರಶ್ನೆಗಳನ್ನು ಕೇಳಿದ ಸದಸ್ಯರುಗಳು, ಮಕ್ಕಳ ಕುರಿತು ವಿಧಾನಮಂಡಲ ಅಧಿವೇಶನಗಳಲ್ಲಿ ಹೆಚ್ಚು ಕಾಳಜಿ ತೋರಿದ ಶಾಸಕರನ್ನು 'ಮಕ್ಕಳ ಸ್ನೇಹಿ ಶಾಸಕರೆಂದು' ಗುರುತಿಸುವುದು. ಯಾವುದಾದರು ಶಾಸಕರು ಮಕ್ಕಳನ್ನು ಕುರಿತು ಒಂದೇ ಒಂದು ಪ್ರಶ್ನೆ ಕೇಳಿದ್ದರೂ, ಅಂತಹ ಪ್ರಶ್ನೆ ಅತ್ಯಂತ ಪ್ರಮುಖವಾದ ಪರಿಣಾಮ ಬೀರಿದ್ದರೆ, ಅಥವಾ ಆ ಪ್ರಶ್ನೆಯು ಮಕ್ಕಳ ದೃಷ್ಟಿಕೋನದಿಂದ ಮುಖ್ಯವಾಗಿದ್ದರೆ ಅಂತಹ ಪ್ರಶ್ನೆ ಕೇಳಿದ ಶಾಸಕರನ್ನೂ ಸಹ ಮಕ್ಕಳ ಸ್ನೇಹಿಗಳೆಂದು ಪರಿಗಣಿಸಲಾಗುತ್ತಿದೆ.
- **ಜಿಲ್ಲಾವಾರು ವಿಂಗಡನೆ:** ಪ್ರತಿಯೊಂದು ಜಿಲ್ಲೆಗೆ ಸಂಬಂಧಿಸಿದಂತೆ ಕೇಳಿರುವ ಒಟ್ಟು ಪ್ರಶ್ನೆಗಳು ಮತ್ತು ಮಕ್ಕಳ ಕೇಂದ್ರಿತ ಪ್ರಶ್ನೆಗಳು.
- ಕ್ಷೇತ್ರವಾರು ಕೇಳಿರುವ ಪ್ರಶ್ನೆಗಳು ಮತ್ತು ಮಕ್ಕಳ ಕೇಂದ್ರಿತ ಪ್ರಶ್ನೆಗಳು.
- ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಮಕ್ಕಳ ಹಕ್ಕುಗಳ ಜಾರಿಗಾಗಿ ತೊಡಗಿಸಿಕೊಂಡಿರುವವರೊಡನೆ ಚರ್ಚಿಸಿ, ಅವರ ಜಿಲ್ಲೆಯ ಮಕ್ಕಳ ಸಮಸ್ಯೆಗಳನ್ನು/ಬೇಡಿಕೆಗಳನ್ನು ಪಡೆದು, ಅವುಗಳನ್ನು ಜನಪ್ರತಿನಿಧಿಗಳಿಗೆ ತಲುಪಿಸುವ ಮೂಲಕ ವಿಧಾನಸಭೆ ಅಥವಾ ವಿಧಾನಪರಿಷತ್ತಿನಲ್ಲಿ ಚರ್ಚೆಯಾಗುವಂತೆ ಮಾಡುವುದು.
- ಚುನಾಯಿತ ಪ್ರತಿನಿಧಿಗಳು, ಪರಿಣಿತರು, ಸಂಶೋಧಕರು, ಪತ್ರಿಕಾ ಪ್ರತಿನಿಧಿಗಳು ಮೊದಲಾದವರೊಡನೆ ವಿಶ್ಲೇಷಣೆಯಲ್ಲಿ ಕಂಡು ಬಂದ ಅಂಶಗಳ ಕುರಿತು ವಿಚಾರ ವಿನಿಮಯ.
- ಇಡೀ ಪ್ರಕ್ರಿಯೆಯ ದಾಖಲಾತಿ, ವರದಿ ತಯಾರಿ, ಅಂತಿಮ ಪ್ರಕಟಣೆ ಮತ್ತು ವಿತರಣೆ.

## 2.2. ಒಟ್ಟು ಪ್ರಶ್ನೆಗಳು – ವಿಧಾನಸಭೆ

2020-21ರ ವಿಶ್ಲೇಷಣಾ ಅವಧಿಯಲ್ಲಿ ಒಟ್ಟು 5 ಬಾರಿ ವಿಧಾನಮಂಡಲ ಅಧಿವೇಶನಗಳು ನಡೆದಿದ್ದು, ಅವುಗಳಲ್ಲಿ ಒಟ್ಟಾರೆಯಾಗಿ 37 ದಿನಗಳ ಕಾಲ ಅಧಿವೇಶನ ನಡೆದಿದೆ. ಒಟ್ಟು 225 ಸದಸ್ಯರನ್ನು ಹೊಂದಿರುವ (224 ಚುನಾಯಿತ + 1 ನಾಮನಿರ್ದೇಶನ) ವಿಧಾನಸಭೆಯ ಅತಿ ಮುಖ್ಯ ಕಲಾಪಗಳೊಂದಾದ ಪ್ರಶ್ನೋತ್ತರ ಸಮಯದಲ್ಲಿ ಎಲ್ಲಾ ಇಲಾಖೆಗಳ ಮೇಲೆ ಕೇಳಿ ಬಂದ ಲಭ್ಯವಿರುವ ಪ್ರಶ್ನೆಗಳ ಸಂಖ್ಯೆ 7491.

**ಪಕ್ಷಾವಾರು ಪ್ರಶ್ನೆಗಳು ವಿಧಾನಸಭೆ**


| ಪಕ್ಷ | ಸದಸ್ಯರ ಸಂಖ್ಯೆ | ಕೇಳಿದ ಒಟ್ಟು ಪ್ರಶ್ನೆಗಳು |
|---|---|---|
| ಬಿ.ಜೆ.ಪಿ. | 120 | 2,534 |
| ಕಾಂಗ್ರೆಸ್ | 69 | 3,056 |
| ಜೆ.ಡಿ.ಎಸ್. | 32 | 1,852 |
| ಪಕ್ಷೇತರ | 2 | 31 |
| ಬಿ.ಎಸ್.ಪಿ. | 1 | 18 |
| ನಾಮಾಂಕಿತ | 1 | 0 |
| ಒಟ್ಟು | 225 | 7491 |

**ಸೂಚನೆ: ಈ ಸದಸ್ಯರ ಸಂಖ್ಯೆಯ ಮಾಹಿತಿಯು ದಿನಾಂಕ 26–6–2020ರಂತೆ**

ಪಕ್ಷಾವಾರು ಕೇಳಿದ ಪ್ರಶ್ನೆಗಳನ್ನು ಪರಿಗಣಿಸಿದರೆ, 69 ಸದಸ್ಯರನ್ನು ಹೊಂದಿರುವ ಕಾಂಗ್ರೆಸ್ ಪಕ್ಷದ ಶಾಸಕರು ಒಟ್ಟು 3,056 ಪ್ರಶ್ನೆಗಳನ್ನು ಕೇಳಿದ್ದಾರೆ. ನಂತರದ ಸ್ಥಾನದಲ್ಲಿ ಬಿ.ಜೆ.ಪಿ. ಪಕ್ಷದ 120 ಶಾಸಕರು (ಇವರಲ್ಲಿ 30ಕ್ಕೂ ಹೆಚ್ಚು ಜನ ಸಚಿವರು) 2,534 ಪ್ರಶ್ನೆಗಳನ್ನು ಮತ್ತು ಜೆ.ಡಿ.ಎಸ್. ಪಕ್ಷದ 32 ಶಾಸಕರು 1852 ಪ್ರಶ್ನೆಗಳನ್ನು ಹಾಗು ಪಕ್ಷೇತರ ಇಬ್ಬರು ಸದಸ್ಯರು 31 ಪ್ರಶ್ನೆಗಳನ್ನು ಕೇಳಿದ್ದಾರೆ.

ಈ ಅಧಿವೇಶನದಲ್ಲಿ ವಿಧಾನಸಭೆಯಲ್ಲಿ ಹೆಚ್ಚು ಪ್ರಶ್ನೆಗಳನ್ನು ಎದುರಿಸಿರುವುದು ಕಂದಾಯ ಇಲಾಖೆ (557 ಪ್ರಶ್ನೆಗಳು). ನಂತರದ ಸ್ಥಾನದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ (454 ಪ್ರಶ್ನೆಗಳು), ಸಮಾಜ ಕಲ್ಯಾಣ (347 ಪ್ರಶ್ನೆಗಳು) ಹಾಗು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ (345 ಪ್ರಶ್ನೆಗಳು) ಇಲಾಖೆಗಳಿವೆ

ಸುಮಾರು 17 ಇಲಾಖೆಗಳು 100ಕ್ಕಿಂತ ಕಡಿಮೆ ಪ್ರಶ್ನೆಗಳನ್ನು ಎದುರಿಸಿವೆ. 10ಕ್ಕಿಂತ ಕಡಿಮೆ ಪ್ರಶ್ನೆಗಳನ್ನು ಎದುರಿಸಿರುವ ವಾರ್ತಾ ಮತ್ತು ಪ್ರಚಾರ (5 ಪ್ರಶ್ನೆಗಳು), ಪರಿಸರ ಮತ್ತು ಜೀವಿಶಾಸ್ತ್ರ (6 ಪ್ರಶ್ನೆಗಳು), ಸಕಾಲ (2 ಪ್ರಶ್ನೆಗಳು) ಹಾಗು ಸಾರ್ವಜನಿಕ ಉದ್ದಿಮೆ (1 ಪ್ರಶ್ನೆಗಳು) ಇಲಾಖೆಗಳನ್ನು ಇತರೆ ಎಂದು ಪರಿಗಣಿಸಲಾಗಿದೆ.



## ಒಟ್ಟು ಪ್ರಶ್ನೆಗಳು – ವಿಧಾನ ಪರಿಷತ್

2020–21ರ ಅವಧಿಗಳಲ್ಲಿ 37 ದಿನಗಳ ಕಾಲ ವಿಧಾನ ಪರಿಷತ್ ಕಲಾಪಗಳ ಅಧಿವೇಶನ ನಡೆಯಿತು. ಪರಿಷತ್ತಿನ ಬಹು ಮುಖ್ಯ ಕಾರ್ಯಕಲಾಪಗಳನ್ನು ಪ್ರಶ್ನೋತ್ತರ ಅವಧಿಯೂ ಒಂದು. ಈ ಪ್ರಶ್ನೋತ್ತರ ಅವಧಿಯಲ್ಲಿ ಪರಿಷತ್ತಿನ 74 ಸದಸ್ಯರು ಕೇಳಿರುವ ಪ್ರಶ್ನೆಗಳ ಸಂಖ್ಯೆ 5,289 (75 ಸದಸ್ಯರಲ್ಲಿ ಒಬ್ಬರು ಸಭಾಪತಿಗಳು)

**ಪಕ್ಷಾವಾರು ಪ್ರಶ್ನೆಗಳು – ವಿಧಾನ ಪರಿಷತ್**


| ಪ್ರತಿನಿಧಿಸುವ ಪಕ್ಷ | ಸದಸ್ಯರ ಸಂಖ್ಯೆ* | ಕೇಳಿದ ಪ್ರಶ್ನೆಗಳ ಸಂಖ್ಯೆ |
|---|---|---|
| ಕಾಂಗ್ರೆಸ್ | 29 | 2,610 |
| ಬಿ.ಜೆ.ಪಿ. | 32 | 1,483 |
| ಜೆ.ಡಿ.ಎಸ್. | 13 | 1,190 |
| ಪಕ್ಷೇತರ | 1 | 6 |
| **ಒಟ್ಟು** | **75** | **5,289** |

**ಸೂಚನೆ: ಈ ಸದಸ್ಯರ ಸಂಖ್ಯೆಯ ಮಾಹಿತಿಯು ದಿನಾಂಕ 10–3–2021ರಂತೆ**

ಪಕ್ಷಾವಾರು ಪ್ರಶ್ನೆಗಳನ್ನು ಗಮನಿಸಿದರೆ ಕಾಂಗ್ರೆಸ್ ಪಕ್ಷದ 29 ಸದಸ್ಯರು ಕೇಳಿರುವ ಪ್ರಶ್ನೆಗಳ ಸಂಖ್ಯೆ 2610, ನಂತರದ ಸ್ಥಾನದಲ್ಲಿ ಬಿ.ಜೆ.ಪಿ. ಪಕ್ಷದ 32 ಸದಸ್ಯರು 1,483 ಪ್ರಶ್ನೆಗಳು ಮತ್ತು ಜೆ.ಡಿ.ಎಸ್. ಪಕ್ಷದ 12 ಸದಸ್ಯರು 1,190 ಪ್ರಶ್ನೆಗಳು ಇದ್ದರೆ, ಏಕೈಕ ಪಕ್ಷೇತರ ಸದಸ್ಯರು 6 ಪ್ರಶ್ನೆಗಳನ್ನು ಕೇಳಿದ್ದಾರೆ.

ಇಲಾಖಾವಾರು ಪ್ರಶ್ನೆಗಳನ್ನು ಗಮನಿಸಿದರೆ, ಈ ಅವಧಿಯಲ್ಲಿ ಅತಿ ಹೆಚ್ಚು ಪ್ರಶ್ನೆಗಳನ್ನು ಎದುರಿಸಿರುವುದು ಕಂದಾಯ ಇಲಾಖೆ (437 ಪ್ರಶ್ನೆಗಳು) ನಂತರದ ಸ್ಥಾನದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ (355 ಪ್ರಶ್ನೆಗಳು) ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳಿವೆ (271 ಪ್ರಶ್ನೆಗಳು).

26 ಇಲಾಖೆಗಳು 100ಕ್ಕೂ ಕಡಿಮೆ ಪ್ರಶ್ನೆಗಳನ್ನು ಎದುರಿಸಿದ್ದರೆ ಸುಮಾರು 17 ಇಲಾಖೆಗಳು 50ಕ್ಕಿಂತ ಕಡಿಮೆ ಪ್ರಶ್ನೆಗಳನ್ನು ಎದುರಿಸಿವೆ.



## 2.3. ಮಕ್ಕಳ ಕೇಂದ್ರಿತ ಪ್ರಶ್ನೆಗಳು – ವಿಧಾನಸಭೆ

ವಿಧಾನ ಮಂಡಲದ ಕೆಳಮನೆಯಾದ ವಿಧಾನಸಭೆಯಲ್ಲಿ ಕೇಳಿ ಬಂದ ಒಟ್ಟು ಮಕ್ಕಳ ಕೇಂದ್ರಿತ ಪ್ರಶ್ನೆಗಳ ಸಂಖ್ಯೆ 342 (ಒಟ್ಟು ಪ್ರಶ್ನೆಯ ಸುಮಾರು ಶೇಕಡಾ 4.57ರಷ್ಟು). ಕಳೆದ ಬಾರಿಗೆ ಹೋಲಿಸಿದರೆ ಈ ಬಾರಿ ಮಕ್ಕಳ ಕೇಂದ್ರಿತ ಪ್ರಶ್ನೆಗಳ ಪ್ರಮಾಣದಲ್ಲಿ ಕಡಿಮೆಯಾಗಿದೆ. (2019–20ರಲ್ಲಿ ಮಕ್ಕಳ ಕೇಂದ್ರಿತ ಪ್ರಶ್ನೆಗಳ ಪ್ರಮಾಣ ಶೇ. 5.4ರಷ್ಟಿತ್ತು).

ಪಕ್ಷಾವಾರು ಕೇಳಿದ ಮಕ್ಕಳ ಕೇಂದ್ರಿತ ಪ್ರಶ್ನೆಗಳನ್ನು ನೋಡಿದಾಗ, ಒಟ್ಟಾರೆಯಾಗಿ ಅತಿ ಹೆಚ್ಚು ಪ್ರಶ್ನೆಗಳನ್ನು ಕೇಳಿದ ಕಾಂಗ್ರೆಸ್ ಪಕ್ಷವು 113 ಮಕ್ಕಳ ಕೇಂದ್ರಿತ ಪ್ರಶ್ನೆಗಳನ್ನು ಕೇಳಿದೆ (ಅಂದರೆ ಒಟ್ಟು ಪ್ರಶ್ನೆಯ ಶೇಕಡಾ 5.43 ರಷ್ಟು). ಶೇಕಡಾವಾರು ಪ್ರಶ್ನೆಗಳನ್ನು ಗಮನಿಸಿದರೆ ಬಿ.ಜೆ.ಪಿ. ಪಕ್ಷದ ಸದಸ್ಯರು ಶೇ. 4.46ರಷ್ಟು ಮಕ್ಕಳ ಕೇಂದ್ರಿತ ಪ್ರಶ್ನೆಗಳನ್ನು (ಕೇಳಿದ 3,066 ಒಟ್ಟು ಪ್ರಶ್ನೆಗಳಲ್ಲಿ 166 ಮಕ್ಕಳ ಕೇಂದ್ರಿತ ಪ್ರಶ್ನೆಗಳು), ಜೆ.ಡಿ.ಎಸ್. ಪಕ್ಷದ ಸದಸ್ಯರು ಶೇ. 3.35ರಷ್ಟು (ಕೇಳಿದ 1,852 ಒಟ್ಟು ಪ್ರಶ್ನೆಗಳಲ್ಲಿ 62 ಮಕ್ಕಳ ಕೇಂದ್ರಿತ ಪ್ರಶ್ನೆಗಳು) ಮಕ್ಕಳ ಕೇಂದ್ರಿತ ಪ್ರಶ್ನೆಗಳನ್ನು ಕೇಳಿದ್ದಾರೆ.

ಕಳೆದ ಬಾರಿಗೆ ಹೋಲಿಸಿದರೆ ಮಕ್ಕಳ ಕೇಂದ್ರಿತ ಪ್ರಶ್ನೆಗಳ ಶೇಕಡಾವಾರು ಪ್ರಮಾಣದಲ್ಲಿ ತುಸು ಕಡಿಮೆಯಾಗಿದ್ದರೂ ಸಹ ಮಕ್ಕಳ ಹಕ್ಕುಗಳ ಕುರಿತಾದ ಹಲವಾರು ಗುಣಾತ್ಮಕ ಪ್ರಶ್ನೆಗಳು ಈ ಅವಧಿಯಲ್ಲಿ ಕೇಳಿಬಂದಿವೆ. ಶಾಲೆಗಳಲ್ಲಿ ಮತ್ತು ಅಂಗನವಾಡಿಗಳಲ್ಲಿ ಮೂಲಸೌಲಭ್ಯ ಹಾಗು ಒದಗಿಸುತ್ತಿರುವ ಕಳಪೆ ಆಹಾರ, ಕೊರೋನಾ ಸಾಂಕ್ರಾಮಿಕದಿಂದ ಮಕ್ಕಳ ಶಿಕ್ಷಣದ ಮೇಲೆ ಪರಿಣಾಮ, ಶಾಲಾ ಮಕ್ಕಳ ಸುರಕ್ಷತೆ ಮಾರ್ಗಸೂಚಿಗಳು, ತಾಯಿ ಮತ್ತು ಮಕ್ಕಳ ಆಸ್ಪತ್ರೆ ಸ್ಥಾಪಿಸುವುದು, ಮಾತೃವಂದನಾ ಯೋಜನೆ, ವಿದ್ಯಾರ್ಥಿನಿಲಯಗಳಲ್ಲಿ ಸೌಲಭ್ಯಗಳು, ಮಹಿಳೆ ಮತ್ತು ಮಕ್ಕಳ ಅಪೌಷ್ಟಿಕತೆ, ಶಿಶು ಮತ್ತು ತಾಯಂದಿರು ಮರಣ ಹೊಂದುತ್ತಿರುವುದು, ಪೌಷ್ಟಿಕ ಆಹಾರ ಪುನಚೇತನ ಕೇಂದ್ರ, ಬಾಲ್ಯ ವಿವಾಹ ಪ್ರಕರಣಗಳು, ಭಾಗ್ಯಲಕ್ಷ್ಮಿ ಯೋಜನೆ ಬಾಂಡ್ ನೀಡಿಕೆಯಲ್ಲಿ ವಿಳಂಬ, ಬಾಲ್ಯವಿವಾಹ, ವಿಕಲಾಂಗ ಮಕ್ಕಳ ಶಿಕ್ಷಣ, ಬಾಲಕಾರ್ಮಿಕ ಪದ್ಧತಿ ಇವೇ ಮೊದಲಾದ ಪ್ರಶ್ನೆಗಳು ಈ ಅವಧಿಯಲ್ಲಿ ಕೇಳಿಬಂದಿವೆ.

### ಮಕ್ಕಳ ಕೇಂದ್ರಿತ ಪ್ರಶ್ನೆಗಳೆಂದರೆ

ಮಕ್ಕಳ ಅಭಿವೃದ್ಧಿ, ಉಳಿವು, ರಕ್ಷಣೆ ಮತ್ತು ಭಾಗವಹಿಸುವಿಕೆಯನ್ನು ಎತ್ತಿ ಹಿಡಿಯುವ ಪ್ರಶ್ನೆಗಳನ್ನು ಮಕ್ಕಳ ಕೇಂದ್ರಿತ ಪ್ರಶ್ನೆಗಳೆಂದು ಪರಿಗಣಿಸಿದ್ದೇವೆ.

**ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ** ಎದುರಿಸಿರುವ ಶಿಕ್ಷಕರ ಕೊರತೆ, ಕೊಠಡಿಗಳ ಕೊರತೆ, ಶೌಚಾಲಯ ವ್ಯವಸ್ಥೆ, ಹೊಸ ಶಾಲೆಗಳನ್ನು ತೆರೆಯುವುದು, ಶಾಲೆಗಳಲ್ಲಿ ನಡೆಯುತ್ತಿರುವ ಲೈಂಗಿಕ ಶೋಷಣೆ, ಬಿಸಿಯೂಟ ಯೋಜನೆ ಕುರಿತಾದ ಪ್ರಶ್ನೆಗಳು;

**ಆರೋಗ್ಯ ಇಲಾಖೆ**ಯ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ತಾಯಿ ಮತ್ತು ಮಕ್ಕಳ ಆಸ್ಪತ್ರೆ, ಔಷಧದ ಕೊರತೆ, ರೋಗನಿರೋಧಕ, ಶಿಶು ಮತ್ತು ತಾಯಂದಿರ ಮರಣ ಕುರಿತಾದ ಪ್ರಶ್ನೆಗಳು;

**ಕಾರ್ಮಿಕ ಇಲಾಖೆ**ಯಿಂದ ಬಾಲಕಾರ್ಮಿಕ ಪದ್ಧತಿ ನಿಷೇಧ;

**ಸಮಾಜ ಕಲ್ಯಾಣ ಇಲಾಖೆ**ಯಿಂದ ವಸತಿ ನಿಲಯಗಳಲ್ಲಿ ಸೌಲಭ್ಯ ಒದಗಿಸುವುದು ಹಾಗೂ ಆಶ್ರಮ ಮತ್ತು ಮೊರಾರ್ಜಿ ಶಾಲೆಗಳ ಕುರಿತಾದ ಪ್ರಶ್ನೆಗಳು;

**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ**ಯಿಂದ ಅಂಗನವಾಡಿಗಳು, ಅಲ್ಲಿನ ಪೌಷ್ಟಿಕ ಆಹಾರ ಮತ್ತು ಇತರೆ ಸೌಲಭ್ಯಗಳು, ಬಾಲಮಂದಿರಗಳ ಪರಿಸ್ಥಿತಿ ಮೊದಲಾದವುಗಳನ್ನು ಮಕ್ಕಳ ಕೇಂದ್ರಿತ ಪ್ರಶ್ನೆಗಳೆಂದು ಪರಿಗಣಿಸಿದ್ದೇವೆ.

ಎಲ್ಲಕ್ಕಿಂತ ಮುಖ್ಯವಾಗಿ ಹಿಂದಿನ ವರ್ಷಗಳಲ್ಲಿ ಕೇಳಿ ಬಂದಿರದಂಥಹ ಕೆಲವೊಂದು ಮಕ್ಕಳ ಕೇಂದ್ರಿತ ಪ್ರಶ್ನೆಗಳೂ ಈ ಬಾರಿ ಕೇಳಿಬಂದಿವೆ. ತಾಯಿ ಮತ್ತು ಮಕ್ಕಳ ಪ್ರತ್ಯೇಕ ಆಸ್ಪತ್ರೆ ನಿರ್ಮಾಣ, ಕೊರೋನಾ ಸಾಂಕ್ರಾಮಿಕದಿಂದ ಮಕ್ಕಳ ಶಿಕ್ಷಣ, ಪೌಷ್ಟಿಕತೆ, ರಕ್ಷಣೆಯ ವಿಚಾರಗಳ ಮೇಲೆ ಬೀರಿದ ಪರಿಣಾಮ, ಭಿನ್ನ ಸಾಮರ್ಥ್ಯದ ಮಕ್ಕಳಿಗಿರುವ ಯೋಜನೆಗಳು, ಶಾಲೆ ಮತ್ತು ಅಂಗನವಾಡಿಗಳಲ್ಲಿ ಆಹಾರ ಪೂರೈಕೆಯಲ್ಲಿ ಕೊರತೆ, ಗಡಿ ಭಾಗದ ಶಾಲೆಗಳಲ್ಲಿ ಶಿಕ್ಷಣದ ಗುಣಮಟ್ಟ, ಕಡ್ಡಾಯ ಶಿಕ್ಷಣದ ಹಕ್ಕನ್ನು ಮೊಟಕುಗೊಳಿಸುತ್ತಿರುವುದು, ರಾಷ್ಟ್ರೀಯ ಶಿಕ್ಷಣ ನೀತಿಯ ಜಾರಿ, ಕರ್ನಾಟಕ ಪಬ್ಲಿಕ್ ಶಾಲೆಗಳು, ದೇವದಾಸಿಯರ ಕಲ್ಯಾಣ, ಬಾಲ ಕಾರ್ಮಿಕರು, ಶುಚಿ ಕಾರ್ಯಕ್ರಮ ಇವೇ ಮೊದಲಾದ ಪ್ರಶ್ನೆಗಳು ಈ ಬಾರಿ ಕೇಳಿಬಂದಿವೆ.

## 2020–21 ಅಧಿವೇಶನಗಳಲ್ಲಿ ವಿಧಾನಸಭೆಯಲ್ಲಿ ಕೇಳಲ್ಪಟ್ಟ ಪಕ್ಷಾವಾರು ಒಟ್ಟು ಪ್ರಶ್ನೆಗಳು ಮತ್ತು ಮಕ್ಕಳ ಕೇಂದ್ರಿತ ಪ್ರಶ್ನೆಗಳು


| ಪಕ್ಷ | ಸದಸ್ಯರ ಸಂಖ್ಯೆ | ಕೇಳಿದ ಒಟ್ಟು ಪ್ರಶ್ನೆಗಳು | ಮಕ್ಕಳ ಕೇಂದ್ರಿತ ಪ್ರಶ್ನೆಗಳು | ಒಟ್ಟು ಪ್ರಶ್ನೆಯ % |
|---|---|---|---|---|
| ಬಿ.ಜೆ.ಪಿ. | 120 | 3,056 | 166 | 5.43 |
| ಕಾಂಗ್ರೆಸ್ | 69 | 2,534 | 113 | 4.46 |
| ಜೆ.ಡಿ.ಎಸ್. | 32 | 1,852 | 62 | 3.35 |
| ಪಕ್ಷೇತರ | 2 | 31 | 1 | 3.23 |
| ಬಿ.ಎಸ್.ಪಿ. | 1 | 18 | 0 | 0.00 |
| ನಾಮನಿರ್ದೇಶಿತ | 1 | 0 | 0 | 0.00 |
| **ಒಟ್ಟು** | **225** | **7,491** | **342** | **4.57** |

### ಮಕ್ಕಳ ಕೇಂದ್ರಿತ ಪ್ರಶ್ನೆಗಳು – ವಿಧಾನ ಪರಿಷತ್

ವಿಧಾನ ಪರಿಷತ್ತಿನ ಅಧಿವೇಶನಗಳಲ್ಲಿ ಕೇಳಿ ಬಂದ ಒಟ್ಟು ಪ್ರಶ್ನೆಗಳ ಸಂಖ್ಯೆ 5,289. ಅವುಗಳಲ್ಲಿ ಮಕ್ಕಳ ಕೇಂದ್ರಿತ ಪ್ರಶ್ನೆಗಳ ಸಂಖ್ಯೆ 266 (ಒಟ್ಟು ಪ್ರಶ್ನೆಯ ಶೇಕಡಾ 5ರಷ್ಟು). ಪಕ್ಷಾವಾರು ಮಕ್ಕಳ ಕೇಂದ್ರಿತ ಪ್ರಶ್ನೆಗಳನ್ನು ಗಮನಿಸಿದರೆ ಬಿ.ಜೆ.ಪಿ. ಪಕ್ಷದ ಸದಸ್ಯರು 99 ಮಕ್ಕಳ ಕೇಂದ್ರಿತ ಪ್ರಶ್ನೆಗಳನ್ನು ಕೇಳಿದ್ದರೆ (ಒಟ್ಟು ಪ್ರಶ್ನೆಯ ಶೇಕಡಾ 6.68ರಷ್ಟು), ಕಾಂಗ್ರೆಸ್ ಪಕ್ಷದ ಸದಸ್ಯರು ಕೇಳಿದ ಮಕ್ಕಳ ಕೇಂದ್ರಿತ ಪ್ರಶ್ನೆಗಳ ಸಂಖ್ಯೆ 120 (ಒಟ್ಟು ಪ್ರಶ್ನೆಯ ಶೇಕಡಾ 4.60ರಷ್ಟು) ಮತ್ತು ಜೆ.ಡಿ.ಎಸ್. ಪಕ್ಷದ ಶಾಸಕರು 47 ಮಕ್ಕಳ ಕೇಂದ್ರಿತ ಪ್ರಶ್ನೆಗಳನ್ನು ಕೇಳಿದ್ದಾರೆ (ಒಟ್ಟು ಪ್ರಶ್ನೆಯ ಶೇಕಡಾ 3.95ರಷ್ಟು). ಪಕ್ಷೇತರ ಸದಸ್ಯರು ಯಾವುದೇ ಮಕ್ಕಳ ಕೇಂದ್ರಿತ ಪ್ರಶ್ನೆಗಳ ಕೇಳಿಲ್ಲ.


| ಪಕ್ಷ | ಸದಸ್ಯರ ಸಂಖ್ಯೆ | ಕೇಳಿದ ಒಟ್ಟು ಪ್ರಶ್ನೆಗಳು | ಮಕ್ಕಳ ಕೇಂದ್ರಿತ ಪ್ರಶ್ನೆಗಳು | ಒಟ್ಟು ಪ್ರಶ್ನೆಯ % |
|---|---|---|---|---|
| ಪಕ್ಷೇತರ | 1 | 6 | 0 | 0 |
| ಬಿ.ಜೆ.ಪಿ. | 32 | 1,483 | 99 | 6.68 |
| ಜೆ.ಡಿ.ಎಸ್. | 13 | 1,190 | 47 | 3.95 |
| ಕಾಂಗ್ರೆಸ್ | 29 | 2,610 | 120 | 4.60 |
| **ಒಟ್ಟು** | **75** | **5,289** | **266** | **5.03** |

## 2.4. ವಿಭಾಗಾವಾರು ಮಕ್ಕಳ ಕೇಂದ್ರಿತ ಪ್ರಶ್ನೆಗಳು - ವಿಧಾನಸಭೆ




ವಿಶ್ಲೇಷಣೆಯ ಅವಧಿಯ ವಿಧಾನಸಭಾ ಅಧಿವೇಶನಗಳಲ್ಲಿ ಒಟ್ಟಾರೆಯಾಗಿ ಕೇಳಿ ಬಂದ ಮಕ್ಕಳ ಕೇಂದ್ರಿತ ಪ್ರಶ್ನೆಗಳನ್ನು ವಿವಿಧ ವಿಭಾಗವಾರು ವಿಂಗಡಿಸಿ ನೋಡಿದಾಗ ಕಂಡುಬರುವುದೇನೆಂದರೆ ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದಂತೆ ಅತಿ ಹೆಚ್ಚು ಪ್ರಶ್ನೆಗಳು ಕೇಳಿಬಂದಿದ್ದರೆ (ಶೇ. 64) ಮಕ್ಕಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಶೇ. 18ರಷ್ಟು ಪ್ರಶ್ನೆಗಳು, ಮಕ್ಕಳ ರಕ್ಷಣೆಗೆ ಸಂಬಂಧಿಸಿದಂತೆ ಶೇ. 4ರಷ್ಟು ಹಾಗು ಮಕ್ಕಳ ಆರೋಗ್ಯ ಮತ್ತು ಪೌಷ್ಟಿಕತೆಗೆ ಸಂಬಂಧಿಸಿದಂತೆ ಶೇ. 14 ರಷ್ಟು ಪ್ರಶ್ನೆಗಳು ಕೇಳಿ ಬಂದಿವೆ.

## ವಿಭಾಗಾವಾರು ಮಕ್ಕಳ ಕೇಂದ್ರಿತ ಪ್ರಶ್ನೆಗಳು – ವಿಧಾನ ಪರಿಷತ್




ವಿಧಾನ ಪರಿಷತ್ತಿನಲ್ಲಿ ಕೇಳಿ ಬಂದ ಒಟ್ಟು ಮಕ್ಕಳ ಕೇಂದ್ರಿತ ಪ್ರಶ್ನೆಗಳಲ್ಲಿ ಶೇಕಡಾ 59ರಷ್ಟು ಪ್ರಶ್ನೆಗಳು ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದ ಪ್ರಶ್ನೆಗಳಾದರೆ, ಶೇ. 16ರಷ್ಟು ಪ್ರಶ್ನೆಗಳು ಮಕ್ಕಳ ರಕ್ಷಣೆ, ಶೇ. 13ರಷ್ಟು ಪ್ರಶ್ನೆಗಳು ಅಭಿವೃದ್ಧಿಗೆ ಸಂಬಂಧಪಟ್ಟ ಪ್ರಶ್ನೆಗಳು ಮತ್ತು ಶೇ. 12ರಷ್ಟು ಪ್ರಶ್ನೆಗಳು ಮಕ್ಕಳ ಆರೋಗ್ಯ ಮತ್ತು ಪೌಷ್ಟಿಕತೆಗೆ ಸಂಬಂಧಪಟ್ಟ ಪ್ರಶ್ನೆಗಳಾಗಿವೆ.

**ಸೂಚನೆ :**

**ಶಿಕ್ಷಣ :** ಕೊರೋನಾದಿಂದ ಮಕ್ಕಳ ಶೈಕ್ಷಣಿಕ ಮಟ್ಟ ಕುಸಿತ, ಆನ್ ಲೈನ್ ಶಿಕ್ಷಣದಿಂದ ಮಕ್ಕಳ ಮೇಲಾಗುವ ಒತ್ತಡ, ಶಾಲಾ ಕಟ್ಟಡಗಳ ದುರಸ್ಥಿ, ಶಾಲಾ ಮಕ್ಕಳಿಗೆ ಬಿಸಿಯೂಟ ಪ್ರಾರಂಭಿಸುವುದು, ಶಿಕ್ಷಕರ ನೇಮಕಾತಿ, ರಾಷ್ಟ್ರೀಯ ಶಿಕ್ಷಣ ನೀತಿಯ ಜಾರಿ, ವಸತಿ ಶಾಲೆಗಳು ಮತ್ತು ಅವುಗಳ ಗುಣಮಟ್ಟ, ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ, ಖಾಸಗಿ ಶಾಲೆಗಳು ಹೆಚ್ಚು ಶುಲ್ಕ ವಸೂಲು ಮಾಡುತ್ತಿರುವುದು, ಇವೇ ಮೊದಲಾದ ವಿಚಾರಗಳಿಗೆ ಸಂಬಂಧಪಟ್ಟ ಪ್ರಶ್ನೆಗಳನ್ನು ಮಕ್ಕಳ ಶಿಕ್ಷಣಕ್ಕೆ ಸಂಬಂಧಪಟ್ಟ ಪ್ರಶ್ನೆಗಳೆಂದು ಪರಿಗಣಿಸಲಾಗಿದೆ.

**ಆರೋಗ್ಯ ಮತ್ತು ಅಪೌಷ್ಟಿಕತೆ :** ತಾಯಿ ಮತ್ತು ಮಕ್ಕಳ ಆಸ್ಪತ್ರೆ, ಮಕ್ಕಳು ಮತ್ತು ತಾಯಂದಿರಲ್ಲಿ ಅಪೌಷ್ಟಿಕತೆ, ನವಜಾತ ಶಿಶುಗಳ ಮರಣ, ಕ್ಷೀರಭಾಗ್ಯ ಯೋಜನೆ, ಮಾತೃಪೂರ್ಣ ಯೋಜನೆ, ಮಾತೃವಂದನಾ ಯೋಜನೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳ ದುರಸ್ಥಿ, ಗುಣಮಟ್ಟದ ಆಹಾರ ಧಾನ್ಯಗಳ ವಿತರಣೆ, ಅಂಗನವಾಡಿ ಆಹಾರ ಪೂರೈಕೆಯಲ್ಲಿ ಅವ್ಯವಹಾರ ಇವೇ ಮೊದಲಾದವುಗಳನ್ನು ಮಕ್ಕಳ ಆರೋಗ್ಯ ಮತ್ತು ಪೌಷ್ಟಿಕತೆಗೆ ಸಂಬಂಧಪಟ್ಟ ಪ್ರಶ್ನೆಗಳೆಂದು ಪರಿಗಣಿಸಲಾಗಿದೆ.

**ಅಭಿವೃದ್ಧಿ :** ಅಂಗನವಾಡಿಗಳ ಗುಣಮಟ್ಟ ಮತ್ತು ಲಭ್ಯವಿರುವ ಸೌಲಭ್ಯಗಳು, ಭಾಗ್ಯಲಕ್ಷ್ಮಿ ಯೋಜನೆ, ಬಾಲಭವನಗಳು, ಕ್ರೀಡೆಗಳಿಗೆ ಪ್ರೋತ್ಸಾಹ, ದೈಹಿಕ ಶಿಕ್ಷಕರ ನೇಮಕಾತಿ, ಬಾಲಭವನ ನಿರ್ಮಾಣ ಇವೇ ಮೊದಲಾದವುಗಳಿಗೆ ಸಂಬಂಧಪಟ್ಟ ಪ್ರಶ್ನೆಗಳನ್ನು ಮಕ್ಕಳ ಅಭಿವೃದ್ಧಿಗೆ ಸಂಬಂಧಪಟ್ಟ ಪ್ರಶ್ನೆಗಳೆಂದು ಪರಿಗಣಿಸಲಾಗಿದೆ.

**ರಕ್ಷಣೆ :** ಮಕ್ಕಳ ಮೇಲಾಗುವ ದೌರ್ಜನ್ಯ, ದೇವದಾಸಿ ಪದ್ಧತಿ, ಬಾಲ್ಯವಿವಾಹ ಪದ್ಧತಿ ಬಾಲಕಾರ್ಮಿಕ ಪದ್ಧತಿ, ಮಕ್ಕಳ ಮೇಲಾದ ದೌರ್ಜನ್ಯಗಳು, ಮಹಿಳೆ ಮತ್ತು ಮಕ್ಕಳ ನಾಪತ್ತೆ, ಮಹಿಳೆ ಮತ್ತು ಮಕ್ಕಳ ಸುರಕ್ಷತೆ, ಶಾಲೆಯಿಂದ ಹೊರಗುಳಿದ ಮಕ್ಕಳು, ದೇವದಾಸಿಯರ ಪುನರ್ವಸತಿ, ಶಿಥಿಲಗೊಂಡಿರುವ ಶಾಲಾ ಮತ್ತು ಅಂಗನವಾಡಿ ಕಟ್ಟಡಗಳು, ನಿರ್ಭಯಾ ನಿಧಿಯ ವೆಚ್ಚ, ಮಾದಕ ವಸ್ತುಗಳ ಮಾರಾಟ ಇವೇ ಮೊದಲಾದವುಗಳಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಮಕ್ಕಳ ರಕ್ಷಣೆಗೆ ಸಂಬಂಧಪಟ್ಟ ಪ್ರಶ್ನೆಗಳೆಂದು ಪರಿಗಣಿಸಲಾಗಿದೆ.

ಮಕ್ಕಳ ಭಾಗವಹಿಸುವಿಕೆ ಎನ್ನುವ ವಿಚಾರದ ಬಗ್ಗೆ ವಿಶ್ಲೇಷಣೆ ನಡೆಸುವಷ್ಟು ಸಂಖ್ಯೆಯಲ್ಲಿ ಪ್ರಶ್ನೆಗಳು ಇಲ್ಲ. ಭಾಗವಹಿಸುವಿಕೆಗೆ ಸಂಬಂಧಿಸಿದಂತೆ ಮಕ್ಕಳ ಹಕ್ಕುಗಳ ಗ್ರಾಮಸಭೆ, ಮಕ್ಕಳ ಹಕ್ಕುಗಳ ಸಂಘಗಳು, ಮಕ್ಕಳ ಸಂಸತ್ ಅನ್ನು ಗುರುತಿಸಬಹುದಾಗಿದೆ.

## 2.5. ಜಿಲ್ಲಾವಾರು ಪ್ರಶ್ನೆಗಳು

2020–21ರ ವಿಧಾನಮಂಡಲದ ವಿಧಾನಸಭೆಯಲ್ಲಿ ಕೇಳಿ ಬಂದ ಎಲ್ಲಾ ಇಲಾಖೆಗಳ ಮೇಲಿನ ಪ್ರಶ್ನೆಗಳನ್ನು ಮತ್ತು ಮಕ್ಕಳ ಕೇಂದ್ರಿತ ಪ್ರಶ್ನೆಗಳನ್ನು ಜಿಲ್ಲಾವಾರು ವಿಭಾಗಿಸಿ ನೋಡಿದಾಗ, ಹಲವಾರು ಗಮನ ಸೆಳೆಯುವ ಅಂಶಗಳು ಎದ್ದು ಕಾಣುತ್ತವೆ. ಎಲ್ಲಾ ಇಲಾಖೆಗಳ ಮೇಲಿನ ಪ್ರಶ್ನೆಗಳನ್ನು ಪರಿಗಣಿಸಿದಾಗ ಅತೀ ಹೆಚ್ಚು ಪ್ರಶ್ನೆಗಳನ್ನು ಕೇಳಿರುವವರು ಬೆಳಗಾವಿ ಜಿಲ್ಲಾ ಶಾಸಕರು (628 ಪ್ರಶ್ನೆಗಳು). ನಂತರದ ಸ್ಥಾನದಲ್ಲಿ ಹಾಸನ ಜಿಲ್ಲೆಯ ಶಾಸಕರು (625) ಮತ್ತು ಬೆಂಗಳೂರು ನಗರ ಜಿಲ್ಲೆಯ ಶಾಸಕರು (564 ಪ್ರಶ್ನೆಗಳು) ಇದ್ದಾರೆ. ಅತ್ಯಂತ ಕಡಿಮೆ ಪ್ರಶ್ನೆಗಳನ್ನು ಕೇಳಿರುವುದು ಹಾವೇರಿ (4) ಮತ್ತು ಗದಗ (11) ಜಿಲ್ಲೆಯ ಶಾಸಕರುಗಳು.

ಇನ್ನು ಜಿಲ್ಲಾವಾರು ಮಕ್ಕಳ ಕೇಂದ್ರಿತ ಪ್ರಶ್ನೆಗಳನ್ನು ಪರಿಗಣಿಸಿದರೆ, ಅತೀ ಹೆಚ್ಚು ಮಕ್ಕಳ ಕೇಂದ್ರಿತ ಪ್ರಶ್ನೆಗಳನ್ನು ಕೇಳಿರುವುದು ಬೆಳಗಾವಿ ಜಿಲ್ಲಾ ಶಾಸಕರು ಮತ್ತು ಬೆಂಗಳೂರು ನಗರ ಜಿಲ್ಲಾ ಶಾಸಕರು (ತಲಾ 35 ಮಕ್ಕಳ ಕೇಂದ್ರಿತ ಪ್ರಶ್ನೆಗಳು)

## 2.6. ಕ್ಷೇತ್ರವಾರು ಪ್ರಶ್ನೆಗಳು

ನಮ್ಮ ವಿಶ್ಲೇಷಣೆಯನ್ನು ಇನ್ನೂ ಆಳಕ್ಕಿಳಿಸಿ, ಪ್ರಶ್ನೆಗಳನ್ನು ಶಾಸಕರು ಪ್ರತಿನಿಧಿಸುವ ಕ್ಷೇತ್ರಕ್ಕೆ ಸೀಮಿತಗೊಳಿಸಿ ನೋಡಿದಾಗ ನಿಜಕ್ಕೂ ಅಚ್ಚರಿಯಾಗುತ್ತದೆ. 224 ಕ್ಷೇತ್ರಗಳನ್ನು ಪ್ರತಿನಿಧಿಸುವ ಶಾಸಕರಲ್ಲಿ ವಿಶ್ಲೇಷಣೆಗೆ ಒಳಪಡಿಸಿರುವ ಅಧಿವೇಶನಗಳಲ್ಲಿ ವಿಧಾನಸಭೆಯಲ್ಲಿ ಪ್ರಶ್ನೆಗಳನ್ನು ಕೇಳಿರುವುದು 130 ಕ್ಷೇತ್ರಗಳ ಪ್ರತಿನಿಧಿಗಳು (ಸಚಿವರನ್ನು ಹೊರತುಪಡಿಸಿ). ಪ್ರಶ್ನೆಗಳನ್ನು ಕೇಳಿರುವ 130 ಕ್ಷೇತ್ರಗಳ ಶಾಸಕರಲ್ಲಿ ಮಕ್ಕಳ ಕೇಂದ್ರಿತ ಪ್ರಶ್ನೆಗಳನ್ನು ಕೇಳಿರುವುದು 105 ಶಾಸಕರು. ಉಳಿದ ಕ್ಷೇತ್ರಗಳ ಶಾಸಕರು ಬೇರೆ ಸಮಸ್ಯೆಗಳ ಕುರಿತಾಗಿ ಪ್ರಶ್ನೆಗಳನ್ನು ಕೇಳಿದ್ದಾರೆಯೇ ಹೊರತು ಮಕ್ಕಳ ಗಂಭೀರ ಸಮಸ್ಯೆಗಳ ಕುರಿತಾದ ಯಾವುದೇ ಪ್ರಶ್ನೆಗಳನ್ನು ಕೇಳಿಲ್ಲ. ಪ್ರಾಯಶಃ ಆಯಾ ಕ್ಷೇತ್ರದ ಮಕ್ಕಳ ಸ್ಥಿತಿಗತಿಯ ಬಗ್ಗೆ, ಅವರ ಸಮಸ್ಯೆಗಳ ಬಗ್ಗೆ ಅಂತಹ ಶಾಸಕರ ಗಮನ ಸೆಳೆಯುವ ಕೆಲಸಗಳನ್ನು ಸ್ವಯಂಸೇವಾ ಸಂಸ್ಥೆಗಳು, ಮಾಧ್ಯಮಗಳು ಅಥವಾ ಶಾಸಕರ ಸಲಹೆಗಾರರು ಮಾಡಿಲ್ಲವೇನೋ?

## 2.7. ಜಿಲ್ಲಾವಾರು ಒಟ್ಟು ಪ್ರಶ್ನೆಗಳು ಮತ್ತು ಮಕ್ಕಳ ಕೇಂದ್ರಿತ ಪ್ರಶ್ನೆಗಳು [ ವಿಧಾನಸಭೆ

| ಕ್ರ.ಸಂ. | ಜಿಲ್ಲೆಗಳು | ಶಾಸಕರ ಸಂಖ್ಯೆ | ಒಟ್ಟು ಪ್ರಶ್ನೆಗಳು | ಮಕ್ಕಳ ಕೇಂದ್ರಿತ ಪ್ರಶ್ನೆಗಳು | ಒಟ್ಟು ಪ್ರಶ್ನೆಯ % |
|---|---|---|---|---|---|
| **ಬೆಳಗಾವಿ ವಿಭಾಗ** | | | | | |
| 1 | ಬಾಗಲಕೋಟೆ | 7 | 134 | 10 | 7.46 |
| 2 | ಬೆಳಗಾವಿ | 18 | 628 | 35 | 5.57 |
| 3 | ವಿಜಯಪುರ | 8 | 436 | 20 | 4.59 |
| 4 | ಉತ್ತರ ಕನ್ನಡ | 6 | 37 | 1 | 2.70 |
| 5 | ಹಾವೇರಿ | 6 | 4 | 0 | 0.00 |
| 6 | ಗದಗ | 4 | 11 | 0 | 0.00 |
| 7 | ಧಾರವಾಡ | 7 | 132 | 9 | 6.82 |
| **ಬೆಂಗಳೂರು ವಿಭಾಗ** | | | | | |
| 8 | ಬೆಂಗಳೂರು ಗ್ರಾಮಾಂತರ | 4 | 395 | 12 | 3.04 |
| 9 | ಶಿವಮೊಗ್ಗ | 7 | 218 | 13 | 5.96 |
| 10 | ಚಿಕ್ಕಬಳ್ಳಾಪುರ | 5 | 298 | 9 | 3.02 |
| 11 | ಚಿತ್ರದುರ್ಗ | 6 | 95 | 2 | 2.11 |
| 12 | ರಾಮನಗರ | 4 | 81 | 2 | 2.47 |
| 13 | ಕೋಲಾರ | 6 | 170 | 13 | 7.65 |
| 14 | ದಾವಣಗೆರೆ | 8 | 43 | 1 | 2.33 |
| 15 | ಬೆಂಗಳೂರು ನಗರ | 28 | 564 | 35 | 6.21 |
| 16 | ತುಮಕೂರು | 11 | 219 | 13 | 5.94 |
| **ಮೈಸೂರು ವಿಭಾಗ** | | | | | |
| 17 | ಮಂಡ್ಯ | 7 | 221 | 9 | 4.07 |
| 18 | ಮೈಸೂರು | 11 | 597 | 21 | 3.52 |
| 19 | ಚಿಕ್ಕಮಗಳೂರು | 5 | 224 | 11 | 4.91 |
| 20 | ಉಡುಪಿ | 5 | 269 | 12 | 4.46 |
| 21 | ಹಾಸನ | 7 | 625 | 25 | 4.00 |
| 22 | ಕೊಡಗು | 2 | 88 | 2 | 2.27 |
| 23 | ಚಾಮರಾಜನಗರ | 4 | 207 | 6 | 2.90 |
| 24 | ದಕ್ಷಿಣ ಕನ್ನಡ | 8 | 466 | 25 | 5.36 |
| **ಕಲಬುರುಗಿ ವಿಭಾಗ** | | | | | |
| 25 | ಬಳ್ಳಾರಿ | 9 | 211 | 8 | 3.79 |
| 26 | ಬೀದರ್ | 6 | 252 | 10 | 3.97 |
| 27 | ಯಾದಗಿರಿ | 4 | 88 | 4 | 4.55 |
| 28 | ರಾಯಚೂರು | 7 | 260 | 9 | 3.46 |
| 29 | ಕಲಬುರಗಿ | 9 | 343 | 17 | 4.96 |
| 30 | ಕೊಪ್ಪಳ | 5 | 171 | 8 | 4.68 |
| | **ಒಟ್ಟು** | **224** | **7,491** | **342** | **4.57** |

## 2.8. ಕ್ಷೇತ್ರಾವಾರು ಪ್ರಶ್ನೆಗಳು ಮತ್ತು ಮಕ್ಕಳ ಕೇಂದ್ರಿತ ಪ್ರಶ್ನೆಗಳು [ ವಿಧಾನಸಭೆ ]

| ಕ್ರ.ಸಂ. | ಶಾಸಕರ ಹೆಸರು | ಪಕ್ಷ | ಕ್ಷೇತ್ರ | ಜಿಲ್ಲೆ | ಒಟ್ಟು ಪ್ರಶ್ನೆಗಳು | ಮಕ್ಕಳ ಕೇಂದ್ರಿತ ಪ್ರಶ್ನೆಗಳು |
|---|---|---|---|---|---|---|
| 1 | ಶ್ರೀ ವೀರಣ್ಣ ಚರಂತಿಮಠ | ಬಿ.ಜೆ.ಪಿ. | ಬಾಗಲಕೋಟೆ | ಬಾಗಲಕೋಟೆ | | |
| 2 | ಶ್ರೀ ಸಿದ್ದರಾಮಯ್ಯ | ಕಾಂಗ್ರೆಸ್ | ಬದಾಮಿ | ಬಾಗಲಕೋಟೆ | | |
| 3 | ಶ್ರೀ ಮುರುಗೇಶ್ ನಿರಾಣಿ * | ಬಿ.ಜೆ.ಪಿ. | ಬೀಳಗಿ | ಬಾಗಲಕೋಟೆ | 6 | |
| 4 | ಶ್ರೀ ಗೋವಿಂದ ಕಾರಜೋಳ * | ಬಿ.ಜೆ.ಪಿ. | ಮುಧೋಳ | ಬಾಗಲಕೋಟೆ | | |
| 5 | ಶ್ರೀ ಆನಂದ ಸಿದ್ದು ನ್ಯಾಮಗೌಡ | ಕಾಂಗ್ರೆಸ್ | ಜಮಖಂಡಿ | ಬಾಗಲಕೋಟೆ | 81 | 6 |
| 6 | ಶ್ರೀ ದೊಡ್ಡನಗೌಡ ಪಾಟೀಲ್ | ಬಿ.ಜೆ.ಪಿ. | ಹುನಗುಂದ | ಬಾಗಲಕೋಟೆ | 16 | 1 |
| 7 | ಶ್ರೀ ಸಿದ್ದು ಸವದಿ | ಬಿ.ಜೆ.ಪಿ. | ತೇರದಾಳ | ಬಾಗಲಕೋಟೆ | 31 | 3 |
| 8 | ಶ್ರೀ ಅನಿಲ ಬೆನಕೆ | ಬಿ.ಜೆ.ಪಿ. | ಬೆಳಗಾವಿ ಉತ್ತರ | ಬೆಳಗಾವಿ | | |
| 9 | ಶ್ರೀಮತಿ ಲಕ್ಷ್ಮೀ ಹೆಬ್ಬಾಳ್ಕರ್ | ಕಾಂಗ್ರೆಸ್ | ಬೆಳಗಾವಿ ಗ್ರಾ | ಬೆಳಗಾವಿ | 50 | 2 |
| 10 | ಶ್ರೀ ಅಭಯ ಪಾಟೀಲ್ | ಬಿ.ಜೆ.ಪಿ. | ಬೆಳಗಾವಿ ದಕ್ಷಿಣ | ಬೆಳಗಾವಿ | 61 | 1 |
| 11 | ಶ್ರೀ ಮಹಾಂತೇಶ್ ಕೌಜಲಗಿ | ಬಿ.ಜೆ.ಪಿ. | ಬೈಲಹೊಂಗಲ | ಬೆಳಗಾವಿ | 109 | 5 |
| 12 | ಶ್ರೀ ಆನಂದ ಚಂದ್ರಶೇಖರ ಮಾಮನಿ | ಬಿ.ಜೆ.ಪಿ. | ಸವದತ್ತಿ ಯಲ್ಲಮ್ಮ | ಬೆಳಗಾವಿ | | |
| 13 | ಶ್ರೀಮತಿ ಶಶಿಕಲಾ ಜೊಲ್ಲೆ* | ಬಿ.ಜೆ.ಪಿ. | ನಿಪ್ಪಾಣಿ | ಬೆಳಗಾವಿ | | |
| 14 | ಶ್ರೀ ಸತೀಶ್ ಜಾರಕಿಹೊಳಿ | ಕಾಂಗ್ರೆಸ್ | ಯಮಕನಮರಡಿ | ಬೆಳಗಾವಿ | 30 | |
| 15 | ಶ್ರೀ ಗಣೇಶ ಹುಕ್ಕೇರಿ | ಕಾಂಗ್ರೆಸ್ | ಚಿಕ್ಕೋಡಿ ಸದಲಗ | ಬೆಳಗಾವಿ | 3 | 1 |
| 16 | ಶ್ರೀ ಬಾಲಚಂದ್ರ ಜಾರಕಿಹೊಳಿ | ಬಿ.ಜೆ.ಪಿ. | ಅರಬಾವಿ | ಬೆಳಗಾವಿ | | |
| 17 | ಶ್ರೀ ಮಹೇಶ್ ಕುಮಠಳ್ಳಿ | ಬಿ.ಜೆ.ಪಿ. | ಅಥಣಿ | ಬೆಳಗಾವಿ | | |
| 18 | ಶ್ರೀ ಮಹಾದೇವಪ್ಪ ಯಾದವಾಡ | ಬಿ.ಜೆ.ಪಿ. | ರಾಮದುರ್ಗ | ಬೆಳಗಾವಿ | 12 | |
| 19 | ಶ್ರೀ ದುರ್ಯೋಧನ ಐಹೊಳೆ | ಬಿ.ಜೆ.ಪಿ. | ರಾಯಬಾಗ | ಬೆಳಗಾವಿ | 86 | 5 |
| 20 | ಶ್ರೀ ಉಮೇಶ್ ಕತ್ತಿ * | ಬಿ.ಜೆ.ಪಿ. | ಹುಕ್ಕೇರಿ | ಬೆಳಗಾವಿ | 13 | 1 |
| 21 | ಶ್ರೀ ರಾಜೀವ್ ಪಿ. | ಬಿ.ಜೆ.ಪಿ. | ಕುಡಚಿ | ಬೆಳಗಾವಿ | 59 | 6 |
| 22 | ಶ್ರೀ ಶ್ರೀಮಂತ ಪಾಟೀಲ್ | ಕಾಂಗ್ರೆಸ್ | ಕಾಗವಾಡ | ಬೆಳಗಾವಿ | | |
| 23 | ಶ್ರೀ ಮಹಾಂತೇಶ ದೊಡ್ಡಗೌಡ್ರ | ಬಿ.ಜೆ.ಪಿ. | ಕಿತ್ತೂರು | ಬೆಳಗಾವಿ | 110 | 4 |
| 24 | ಶ್ರೀಮತಿ ಅಂಜಲಿ ನಿಂಬಾಳ್ಕರ್ | ಕಾಂಗ್ರೆಸ್ | ಖಾನಾಪುರ | ಬೆಳಗಾವಿ | 75 | 9 |
| 25 | ಶ್ರೀ ರಮೇಶ್ ಜಾರಕಿಹೊಳಿ | ಬಿ.ಜೆ.ಪಿ. | ಗೋಕಾಕ್ | ಬೆಳಗಾವಿ | | |
| 26 | ಶ್ರೀ ದೇವಾನಂದ ಚವ್ಹಾಣ್ | ಜೆ.ಡಿ.ಎಸ್. | ನಾಗಠಾಣ | ವಿಜಯಪುರ | 112 | 5 |
| 27 | ಶ್ರೀ ಬಸನಗೌಡ ಪಾಟೀಲ ಯತ್ನಾಳ | ಬಿ.ಜೆ.ಪಿ. ನಗರ | ವಿಜಯಪುರ | ವಿಜಯಪುರ | 54 | |
| 28 | ಶ್ರೀ ಶಿವಾನಂದ ಪಾಟೀಲ್ | ಕಾಂಗ್ರೆಸ್ | ಬಸವನಬಾಗೇವಾಡಿ | ವಿಜಯಪುರ | 126 | 6 |
| 29 | ಶ್ರೀ ಪಾಟೀಲ್ ಎಂ.ಬಿ. | ಕಾಂಗ್ರೆಸ್ | ಬಬಲೇಶ್ವರ | ವಿಜಯಪುರ | 3 | |
| 30 | ಶ್ರೀ ಮನಗೂಳಿ ಎಂ.ಸಿ. | ಜೆ.ಡಿ.ಎಸ್. | ಸಿಂದಗಿ | ವಿಜಯಪುರ | 1 | |
| 31 | ಶ್ರೀ ಪಾಟೀಲ್ (ನಡಹಳ್ಳಿ) ಎ.ಎಸ್. | ಬಿ.ಜೆ.ಪಿ. | ಮುದ್ದೇಬಿಹಾಳ | ವಿಜಯಪುರ | 5 | |
| 32 | ಶ್ರೀ ಯಶವಂತರಾಯಗೌಡ ಪಾಟೀಲ್ | ಕಾಂಗ್ರೆಸ್ | ಇಂಡಿ | ವಿಜಯಪುರ | 130 | 8 |
| 33 | ಶ್ರೀ ಸೋಮನಗೌಡ ಪಾಟೀಲ | ಬಿ.ಜೆ.ಪಿ. | ದೇವರಹಿಪ್ಪರಗಿ | ವಿಜಯಪುರ | 16 | 1 |
| 34 | ಶ್ರೀ ಸುನೀಲ ನಾಯ್ಕ | ಬಿ.ಜೆ.ಪಿ. | ಭಟ್ಕಳ | ಉತ್ತರ ಕನ್ನಡ | 7 | |

| ಕ್ರ.ಸಂ. | ಶಾಸಕರ ಹೆಸರು | ಪಕ್ಷ | ಕ್ಷೇತ್ರ | ಜಿಲ್ಲೆ | ಒಟ್ಟು ಪ್ರಶ್ನೆಗಳು | ಮಕ್ಕಳ ಕೇಂದ್ರಿತ ಪ್ರಶ್ನೆಗಳು |
|---|---|---|---|---|---|---|
| 35 | ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ | ಬಿ.ಜೆ.ಪಿ. | ಶಿರಸಿ | ಉತ್ತರ ಕನ್ನಡ | | |
| 36 | ಶ್ರೀ ಶಿವರಾಮ ಹೆಬ್ಬಾರ * | ಬಿ.ಜೆ.ಪಿ. | ಯಲ್ಲಾಪುರ | ಉತ್ತರ ಕನ್ನಡ | | |
| 37 | ಶ್ರೀ ದೇಶಪಾಂಡೆ ಆರ್.ವಿ. | ಕಾಂಗ್ರೆಸ್ | ಹಳಿಯಾಳ | ಉತ್ತರ ಕನ್ನಡ | 10 | |
| 38 | ಶ್ರೀ ದಿನಕರ ಶೆಟ್ಟಿ | ಬಿ.ಜೆ.ಪಿ. | ಕುಮಟಾ | ಉತ್ತರ ಕನ್ನಡ | 13 | 1 |
| 39 | ಶ್ರೀಮತಿ ರೂಪಾಲಿ ಸತೀಶ್ ನಾಯ್ಕ | ಬಿ.ಜೆ.ಪಿ. | ಕಾರವಾರ | ಉತ್ತರ ಕನ್ನಡ | 7 | |
| 40 | ಶ್ರೀ ವಿರೂಪಾಕ್ಷಪ್ಪ ಬಳ್ಳಾರಿ | ಬಿ.ಜೆ.ಪಿ. | ಬ್ಯಾಡಗಿ | ಹಾವೇರಿ | 4 | |
| 41 | ಶ್ರೀ ಪಾಟೀಲ್ ಬಿ.ಸಿ. * | ಬಿ.ಜೆ.ಪಿ. | ಹಿರೇಕೆರೂರ | ಹಾವೇರಿ | | |
| 42 | ಶ್ರೀ ಬಸವರಾಜ ಬೊಮ್ಮಾಯಿ ** | ಬಿ.ಜೆ.ಪಿ. | ಶಿಗ್ಗಾಂವಿ | ಹಾವೇರಿ | | |
| 43 | ಶ್ರೀ ಅರುಣ್ ಕುಮಾರ್ ಗುತ್ತೂರ | ಬಿ.ಜೆ.ಪಿ. | ರಾಣೇಬೆನ್ನೂರು | ಹಾವೇರಿ | | |
| 44 | ಶ್ರೀ ಉದಾಸಿ ಸಿ.ಎಂ. | ಬಿ.ಜೆ.ಪಿ. | ಹಾನಗಲ್ಲ | ಹಾವೇರಿ | | |
| 45 | ಶ್ರೀ ನೆಹರೂ ಓಲೇಕಾರ | ಬಿ.ಜೆ.ಪಿ. | ಹಾವೇರಿ | ಹಾವೇರಿ | | |
| 46 | ಶ್ರೀ ಪಾಟೀಲ್ ಸಿ.ಸಿ. * | ಬಿ.ಜೆ.ಪಿ. | ನರಗುಂದ | ಗದಗ | | |
| 47 | ಶ್ರೀ ರಾಮಣ್ಣ ಲಮಾಣಿ | ಬಿ.ಜೆ.ಪಿ. | ಶಿರಹಟ್ಟಿ | ಗದಗ | | |
| 48 | ಶ್ರೀ ಕಳಕಪ್ಪ ಬಂಡಿ | ಬಿ.ಜೆ.ಪಿ. | ರೋಣ | ಗದಗ | | |
| 49 | ಶ್ರೀ ಪಾಟೀಲ್ ಎಚ್.ಕೆ. | ಕಾಂಗ್ರೆಸ್ | ಗದಗ | ಗದಗ | 11 | |
| 50 | ಶ್ರೀ ಶಂಕರ ಪಾಟೀಲ ಮುನೇನಕೊಪ್ಪ* | ಬಿ.ಜೆ.ಪಿ. | ನವಲಗುಂದ | ಧಾರವಾಡ | | |
| 51 | ಶ್ರೀ ಜಗದೀಶ್ ಶೆಟ್ಟರ್ | ಬಿ.ಜೆ.ಪಿ. | ಹು–ಧಾ ಸೆಂಟ್ರಲ್ | ಧಾರವಾಡ | | |
| 52 | ಶ್ರೀ ಅರವಿಂದ ಬೆಲ್ಲದ | ಬಿ.ಜೆ.ಪಿ. | ಹು–ಧಾ ಪಶ್ಚಿಮ | ಧಾರವಾಡ | | |
| 53 | ಶ್ರೀ ಅಬ್ಬಯ್ಯ ಪ್ರಸಾದ್ | ಕಾಂಗ್ರೆಸ್ | ಹು–ಧಾ ಪೂರ್ವ | ಧಾರವಾಡ | 61 | 5 |
| 54 | ಶ್ರೀ ನಿಂಬಣ್ಣವರ ಸಿ.ಎಂ. | ಬಿ.ಜೆ.ಪಿ. | ಕಲಘಟಗಿ | ಧಾರವಾಡ | 29 | 3 |
| 55 | ಶ್ರೀಮತಿ ಕುಸುಮಾವತಿ ಸಿ. ಶಿವಳ್ಳಿ | ಕಾಂಗ್ರೆಸ್ | ಕುಂದಗೋಳ | ಧಾರವಾಡ | 19 | |
| 56 | ಶ್ರೀ ಅಮೃತ ದೇಸಾಯಿ | ಬಿ.ಜೆ.ಪಿ. | ಧಾರವಾಡ | ಧಾರವಾಡ | 23 | 1 |
| 57 | ಡಾ. ಶ್ರೀನಿವಾಸಮೂರ್ತಿ ಕೆ. | ಜೆ.ಡಿ.ಎಸ್. | ನೆಲಮಂಗಲ | ಬೆಂಗಳೂರು ಗ್ರಾ | 140 | 6 |
| 58 | ಶ್ರೀ ಶರತ್‌ಕುಮಾರ್ ಬಚ್ಚೇಗೌಡ | ಪಕ್ಷೇತರ | ಹೊಸಕೋಟೆ | ಬೆಂಗಳೂರು ಗ್ರಾ | 31 | 1 |
| 59 | ಶ್ರೀ ನಾರಾಯಣಸ್ವಾಮಿ ಎಲ್.ಎನ್. | ಜೆ.ಡಿ.ಎಸ್. | ದೇವನಹಳ್ಳಿ | ಬೆಂಗಳೂರು ಗ್ರಾ | 129 | 1 |
| 60 | ಶ್ರೀ ವೆಂಕಟರಮಣಯ್ಯ ಟಿ. | ಕಾಂಗ್ರೆಸ್ | ದೊಡ್ಡಬಳ್ಳಾಪುರ | ಬೆಂಗಳೂರು ಗ್ರಾ | 94 | 4 |
| 61 | ಶ್ರೀ ಸಂಗಮೇಶ್ವರ್ ಬಿ.ಕೆ. | ಕಾಂಗ್ರೆಸ್ | ಭದ್ರಾವತಿ | ಶಿವಮೊಗ್ಗ | 22 | 1 |
| 62 | ಶ್ರೀ ಹರತಾಳು ಹಾಲಪ್ಪ | ಬಿ.ಜೆ.ಪಿ. | ಸಾಗರ | ಶಿವಮೊಗ್ಗ | 56 | 1 |
| 63 | ಶ್ರೀ ಕುಮಾರ್ ಬಂಗಾರಪ್ಪ | ಬಿ.ಜೆ.ಪಿ. | ಸೊರಬ | ಶಿವಮೊಗ್ಗ | 54 | 6 |
| 64 | ಶ್ರೀ ಈಶ್ವರಪ್ಪ ಕೆ.ಎಸ್. * | ಬಿ.ಜೆ.ಪಿ. | ಶಿವಮೊಗ್ಗ | ಶಿವಮೊಗ್ಗ | | |
| 65 | ಶ್ರೀ ಅಶೋಕ್ ನಾಯ್ಕ್ | ಬಿ.ಜೆ.ಪಿ. | ಶಿವಮೊಗ್ಗ ಗ್ರಾ | ಶಿವಮೊಗ್ಗ | 74 | 5 |
| 66 | ಶ್ರೀ ಯಡಿಯೂರಪ್ಪ ಬಿ.ಎಸ್. ** | ಬಿ.ಜೆ.ಪಿ. | ಶಿಕಾರಿಪುರ | ಶಿವಮೊಗ್ಗ | | |
| 67 | ಶ್ರೀ ಅರಗ ಜ್ಞಾನೇಂದ್ರ * | ಬಿ.ಜೆ.ಪಿ. | ತೀರ್ಥಹಳ್ಳಿ | ಶಿವಮೊಗ್ಗ | 12 | |
| 68 | ಶ್ರೀ ಸುಬ್ಬಾರೆಡ್ಡಿ ಎಸ್.ಎನ್. | ಕಾಂಗ್ರೆಸ್ | ಬಾಗೇಪಲ್ಲಿ | ಚಿಕ್ಕಬಳ್ಳಾಪುರ | 113 | 5 |
| 69 | ಶ್ರೀ ಮುನಿಯಪ್ಪ ವಿ. | ಕಾಂಗ್ರೆಸ್ | ಶಿಡ್ಲಘಟ್ಟ | ಚಿಕ್ಕಬಳ್ಳಾಪುರ | 49 | 1 |

| ಕ್ರ.ಸಂ. | ಶಾಸಕರ ಹೆಸರು | ಪಕ್ಷ | ಕ್ಷೇತ್ರ | ಜಿಲ್ಲೆ | ಒಟ್ಟು ಪ್ರಶ್ನೆಗಳು | ಮಕ್ಕಳ ಕೇಂದ್ರಿತ ಪ್ರಶ್ನೆಗಳು |
|---|---|---|---|---|---|---|
| 70 | ಶ್ರೀ ಕೃಷ್ಣಾರೆಡ್ಡಿ ಜೆ.ಕೆ. | ಜೆ.ಡಿ.ಎಸ್. | ಚಿಂತಾಮಣಿ | ಚಿಕ್ಕಬಳ್ಳಾಪುರ | 95 | 2 |
| 71 | ಡಾ. ಸುಧಾಕರ್ ಕೆ. * | ಬಿ.ಜೆ.ಪಿ. | ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ | | |
| 72 | ಶ್ರೀ ಶಿವಶಂಕರರೆಡ್ಡಿ | ಕಾಂಗ್ರೆಸ್ | ಗೌರಿಬಿದನೂರು | ಚಿಕ್ಕಬಳ್ಳಾಪುರ | 44 | 1 |
| 73 | ಶ್ರೀಮತಿ ಪೂರ್ಣಿಮಾ | ಬಿ.ಜೆ.ಪಿ. | ಹಿರಿಯೂರು | ಚಿತ್ರದುರ್ಗ | 1 | |
| 74 | ಶ್ರೀ ಶ್ರೀರಾಮುಲು ಬಿ. * | ಬಿ.ಜೆ.ಪಿ. | ಮೊಳಕಾಲ್ಮೂರು | ಚಿತ್ರದುರ್ಗ | | |
| 75 | ಶ್ರೀ ತಿಪ್ಪಾರೆಡ್ಡಿ ಜಿ.ಎಚ್. | ಬಿ.ಜೆ.ಪಿ. | ಚಿತ್ರದುರ್ಗ | ಚಿತ್ರದುರ್ಗ | | |
| 76 | ಶ್ರೀ ಗೂಳಿಹಟ್ಟಿ ಡಿ. ಶೇಖರ್ | ಬಿ.ಜೆ.ಪಿ. | ಹೊಸದುರ್ಗ | ಚಿತ್ರದುರ್ಗ | 50 | |
| 77 | ಶ್ರೀ ಚಂದ್ರಪ್ಪ ಎಂ. | ಬಿ.ಜೆ.ಪಿ. | ಹೊಳಲ್ಕೆರೆ | ಚಿತ್ರದುರ್ಗ | 4 | |
| 78 | ಶ್ರೀ ರಘುಮೂರ್ತಿ ಟಿ. | ಕಾಂಗ್ರೆಸ್ | ಚಳ್ಳಕೆರೆ | ಚಿತ್ರದುರ್ಗ | 40 | 2 |
| 79 | ಶ್ರೀ ಮಂಜುನಾಥ್ ಎ. | ಜೆ.ಡಿ.ಎಸ್. | ಮಾಗಡಿ | ರಾಮನಗರ | 65 | 2 |
| 80 | ಶ್ರೀಮತಿ ಅನಿತಾ ಕುಮಾರಸ್ವಾಮಿ | ಜೆ.ಡಿ.ಎಸ್ | ರಾಮನಗರ | ರಾಮನಗರ | 2 | |
| 81 | ಶ್ರೀ ಶಿವಕುಮಾರ್ ಡಿ.ಕೆ. | ಕಾಂಗ್ರೆಸ್ | ಕನಕಪುರ | ರಾಮನಗರ | 14 | |
| 82 | ಶ್ರೀ ಕುಮಾರಸ್ವಾಮಿ ಎಚ್.ಡಿ. | ಜೆ.ಡಿ.ಎಸ್. | ಚನ್ನಪಟ್ಟಣ | ರಾಮನಗರ | | |
| 83 | ಶ್ರೀ ನಾರಾಯಣಸ್ವಾಮಿ ಎಸ್.ಎನ್. | ಕಾಂಗ್ರೆಸ್ | ಬಂಗಾರಪೇಟೆ | ಕೋಲಾರ | 84 | 7 |
| 84 | ಶ್ರೀ ರಮೇಶ್ ಕುಮಾರ್ ಕೆ.ಆರ್. | ಕಾಂಗ್ರೆಸ್ | ಶ್ರೀನಿವಾಸಪುರ | ಕೋಲಾರ | 7 | 1 |
| 85 | ಶ್ರೀ ನಾಗೇಶ್ ಎಚ್. | ಪಕ್ಷೇತರ | ಮುಳಬಾಗಿಲು | ಕೋಲಾರ | | |
| 86 | ಶ್ರೀ ನಂಜೇಗೌಡ ಕೆ.ವೈ. | ಕಾಂಗ್ರೆಸ್ | ಮಾಲೂರು | ಕೋಲಾರ | 72 | 5 |
| 87 | ಶ್ರೀಮತಿ ರೂಪಕಲಾ ಎಂ. | ಕಾಂಗ್ರೆಸ್ | ಕೆ.ಜಿ.ಎಫ್. | ಕೋಲಾರ | 6 | |
| 88 | ಶ್ರೀ ಶ್ರೀನಿವಾಸಗೌಡ ಕೆ. | ಜೆ.ಡಿ.ಎಸ್. | ಕೋಲಾರ | ಕೋಲಾರ | 1 | |
| 89 | ಶ್ರೀ ಲಿಂಗಣ್ಣ ಎನ್. | ಬಿ.ಜೆ.ಪಿ. | ಮಾಯಕೊಂಡ | ದಾವಣಗೆರೆ | 5 | |
| 90 | ಶ್ರೀ ರಾಮಚಂದ್ರ ಎಸ್.ವಿ. | ಬಿ.ಜೆ.ಪಿ. | ಜಗಳೂರು | ದಾವಣಗೆರೆ | 4 | |
| 91 | ಶ್ರೀ ಕರುಣಾಕರ ರೆಡ್ಡಿ ಕೆ. | ಬಿ.ಜೆ.ಪಿ. | ಹರಪನಹಳ್ಳಿ | ದಾವಣಗೆರೆ | 19 | |
| 92 | ಶ್ರೀ ರಾಮಪ್ಪ ಎಸ್. | ಕಾಂಗ್ರೆಸ್ | ಹರಿಹರ | ದಾವಣಗೆರೆ | 14 | 1 |
| 93 | ಶ್ರೀ ರೇಣುಕಾಚಾರ್ಯ ಎಂ.ಪಿ. | ಬಿ.ಜೆ.ಪಿ. | ಹೊನ್ನಾಳಿ | ದಾವಣಗೆರೆ | | |
| 94 | ಶ್ರೀ ಮಾಡಾಳು ವಿರೂಪಾಕ್ಷಪ್ಪ ಕೆ. | ಬಿ.ಜೆ.ಪಿ. | ಚನ್ನಗಿರಿ | ದಾವಣಗೆರೆ | 1 | |
| 95 | ಶ್ರೀ ಶಾಮನೂರು ಶಿವಶಂಕರಪ್ಪ | ಕಾಂಗ್ರೆಸ್ | ದಾವಣಗೆರೆ ದಕ್ಷಿಣ | ದಾವಣಗೆರೆ | | |
| 96 | ಶ್ರೀ ರವೀಂದ್ರನಾಥ ಎಸ್.ಎ. | ಬಿ.ಜೆ.ಪಿ. | ದಾವಣಗೆರೆ ಉತ್ತರ | ದಾವಣಗೆರೆ | | |
| 97 | ಶ್ರೀ ಕೃಷ್ಣ ಬೈರೇಗೌಡ | ಕಾಂಗ್ರೆಸ್ | ಬ್ಯಾಟರಾಯನಪುರ | ಬೆಂಗಳೂರು ನಗರ | 32 | |
| 98 | ಶ್ರೀ ಸತೀಶ್ ರೆಡ್ಡಿ | ಬಿ.ಜೆ.ಪಿ. | ಬೊಮ್ಮನಹಳ್ಳಿ | ಬೆಂಗಳೂರು ನಗರ | 11 | 1 |
| 99 | ಶ್ರೀ ಕೃಷ್ಣಪ್ಪ ಎಂ. | ಬಿ.ಜೆ.ಪಿ. | ಬೆಂಗಳೂರು ದಕ್ಷಿಣ | ಬೆಂಗಳೂರು ನಗರ | | |
| 100 | ಶ್ರೀ ಜಾರ್ಜ್ ಕೆ.ಜೆ. | ಕಾಂಗ್ರೆಸ್ | ಸರ್ವಜ್ಞನಗರ | ಬೆಂಗಳೂರು ನಗರ | 14 | |
| 101 | ಶ್ರೀ ಅಖಂಡ ಶ್ರೀನಿವಾಸಮೂರ್ತಿ | ಕಾಂಗ್ರೆಸ್ | ಪುಲಿಕೇಶಿನಗರ | ಬೆಂಗಳೂರು ನಗರ | 21 | 3 |
| 102 | ಶ್ರೀ ಅಶೋಕ್ ಆರ್.* | ಬಿ.ಜೆ.ಪಿ. | ಪದ್ಮನಾಭನಗರ | ಬೆಂಗಳೂರು ನಗರ | | |
| 103 | ಶ್ರೀ ಹ್ಯಾರಿಸ್ ಎನ್.ಎ. | ಕಾಂಗ್ರೆಸ್ | ಶಾಂತಿನಗರ | ಬೆಂಗಳೂರು ನಗರ | 145 | 10 |
| 104 | ಶ್ರೀ ಕೃಷ್ಣಪ್ಪ ಎಂ. | ಕಾಂಗ್ರೆಸ್ | ವಿಜಯನಗರ | ಬೆಂಗಳೂರು ನಗರ | 2 | 1 |

| ಕ್ರ.ಸಂ. | ಶಾಸಕರ ಹೆಸರು | ಪಕ್ಷ | ಕ್ಷೇತ್ರ | ಜಿಲ್ಲೆ | ಒಟ್ಟು ಪ್ರಶ್ನೆಗಳು | ಮಕ್ಕಳ ಕೇಂದ್ರಿತ ಪ್ರಶ್ನೆಗಳು |
|---|---|---|---|---|---|---|
| 105 | ಶ್ರೀ ರವಿಸುಬ್ರಹ್ಮಣ್ಯ | ಬಿ.ಜೆ.ಪಿ. | ಬಸವನಗುಡಿ | ಬೆಂಗಳೂರು ನಗರ | 16 | 1 |
| 106 | ಶ್ರೀ ರಾಮಲಿಂಗಾರೆಡ್ಡಿ | ಕಾಂಗ್ರೆಸ್ | ಬಿ.ಟಿ.ಎಂ. ಲೇಔಟ್ | ಬೆಂಗಳೂರು ನಗರ | 12 | 1 |
| 107 | ಶ್ರೀ ರಘು ಎಸ್. | ಬಿ.ಜೆ.ಪಿ | ಸಿ.ವಿ. ರಾಮನ್ ನಗರ | ಬೆಂಗಳೂರು ನಗರ | | |
| 108 | ಶ್ರೀ ರಿಜ್ವಾನ್ ಅರ್ಷದ್ | ಕಾಂಗ್ರೆಸ್ | ಶಿವಾಜಿನಗರ | ಬೆಂಗಳೂರು ನಗರ | 36 | 1 |
| 109 | ಡಾ. ಅಶ್ವತ್ಥನಾರಾಯಣ ಸಿ.ಎನ್.* | ಬಿ.ಜೆ.ಪಿ. | ಮಲ್ಲೇಶ್ವರಂ | ಬೆಂಗಳೂರು ನಗರ | | |
| 110 | ಶ್ರೀ ಗೋಪಾಲಯ್ಯ ಕೆ.* | ಬಿ.ಜೆ.ಪಿ | ಮಹಾಲಕ್ಷ್ಮಿ ಲೇಔಟ್ | ಬೆಂಗಳೂರು ನಗರ | | |
| 111 | ಶ್ರೀ ಅರವಿಂದ ಲಿಂಬಾವಳಿ | ಬಿ.ಜೆ.ಪಿ | ಮಹದೇವಪುರ | ಬೆಂಗಳೂರು ನಗರ | | |
| 112 | ಶ್ರೀ ಸೋಮಶೇಖರ್ ಎಸ್.ಟಿ.* | ಬಿ.ಜೆ.ಪಿ | ಯಶವಂತಪುರ | ಬೆಂಗಳೂರು ನಗರ | | |
| 113 | ಶ್ರೀ ವಿಶ್ವನಾಥ್ ಎಸ್.ಆರ್. | ಬಿ.ಜೆ.ಪಿ. | ಯಲಹಂಕ | ಬೆಂಗಳೂರು ನಗರ | | |
| 114 | ಶ್ರೀ ಉದಯ ಗರುಡಾಚಾರ್ | ಬಿ.ಜೆ.ಪಿ. | ಚಿಕ್ಕಪೇಟೆ | ಬೆಂಗಳೂರು ನಗರ | | |
| 115 | ಶ್ರೀ ಶಿವಣ್ಣ ಬಿ. | ಕಾಂಗ್ರೆಸ್ | ಆನೇಕಲ್ | ಬೆಂಗಳೂರು ನಗರ | 88 | |
| 116 | ಶ್ರೀಮತಿ ಸೌಮ್ಯ ರೆಡ್ಡಿ | ಕಾಂಗ್ರೆಸ್ | ಜಯನಗರ | ಬೆಂಗಳೂರು ನಗರ | 77 | 11 |
| 117 | ಶ್ರೀ ಮುನಿರತ್ನ * | ಬಿ.ಜೆ.ಪಿ | ರಾಜರಾಜೇಶ್ವರಿ ನಗರ | ಬೆಂಗಳೂರು ನಗರ | 8 | |
| 118 | ಶ್ರೀ ಸುರೇಶ್‌ಕುಮಾರ್ | ಬಿ.ಜೆ.ಪಿ. | ರಾಜಾಜಿನಗರ | ಬೆಂಗಳೂರು ನಗರ | | |
| 119 | ಶ್ರೀ ಬೈರತಿ ಸುರೇಶ್ | ಕಾಂಗ್ರೆಸ್ | ಹೆಬ್ಬಾಳ | ಬೆಂಗಳೂರು ನಗರ | 20 | 2 |
| 120 | ಶ್ರೀ ಬಸವರಾಜ ಬಿ.ಎ.* | ಬಿ.ಜೆ.ಪಿ | ಕೆ.ಆರ್. ಪುರಂ | ಬೆಂಗಳೂರು ನಗರ | | |
| 121 | ಶ್ರೀ ದಿನೇಶ್ ಗುಂಡೂರಾವ್ | ಕಾಂಗ್ರೆಸ್ | ಗಾಂಧಿನಗರ | ಬೆಂಗಳೂರು ನಗರ | 50 | 4 |
| 122 | ಶ್ರೀ ಸೋಮಣ್ಣ ವಿ.* | ಬಿ.ಜೆ.ಪಿ. | ಗೋವಿಂದರಾಜನಗರ | ಬೆಂಗಳೂರು ನಗರ | | |
| 123 | ಶ್ರೀ ಮಂಜುನಾಥ್ ಆರ್. | ಜೆ.ಡಿ.ಎಸ್ | ದಾಸರಹಳ್ಳಿ | ಬೆಂಗಳೂರು ನಗರ | 28 | |
| 124 | ಶ್ರೀ ಜಮೀರ್ ಅಹಮದ್ ಖಾನ್ | ಕಾಂಗ್ರೆಸ್ | ಚಾಮರಾಜಪೇಟೆ | ಬೆಂಗಳೂರು ನಗರ | 5 | |
| 125 | ಶ್ರೀ ವೆಂಕಟರಮಣಪ್ಪ | ಕಾಂಗ್ರೆಸ್ | ಪಾವಗಡ | ತುಮಕೂರು | | |
| 126 | ಶ್ರೀ ಸತ್ಯನಾರಾಯಣ ಬಿ. | ಜೆ.ಡಿ.ಎಸ್. | ಶಿರಾ | ತುಮಕೂರು | 1 | |
| 127 | ಶ್ರೀ ವೀರಭದ್ರಯ್ಯ ಎಂ.ವಿ. | ಜೆ.ಡಿ.ಎಸ್. | ಮಧುಗಿರಿ | ತುಮಕೂರು | 35 | 2 |
| 128 | ಶ್ರೀ ಮಾಧುಸ್ವಾಮಿ ಜೆ.ಸಿ.* | ಬಿ.ಜೆ.ಪಿ. | ಚಿಕ್ಕನಾಯಕನಹಳ್ಳಿ | ತುಮಕೂರು | | |
| 129 | ಶ್ರೀ ರಂಗನಾಥ್ ಎಚ್.ಡಿ. | ಕಾಂಗ್ರೆಸ್ | ಕುಣಿಗಲ್ | ತುಮಕೂರು | 56 | 8 |
| 130 | ಡಾ. ಪರಮೇಶ್ವರ್ ಜಿ. | ಕಾಂಗ್ರೆಸ್ | ಕೊರಟಗೆರೆ | ತುಮಕೂರು | 9 | 1 |
| 131 | ಶ್ರೀ ಶ್ರೀನಿವಾಸ್ ಎಸ್.ಆರ್. | ಜೆ.ಡಿ.ಎಸ್. | ಗುಬ್ಬಿ | ತುಮಕೂರು | | |
| 132 | ಶ್ರೀ ಜ್ಯೋತಿ ಗಣೇಶ್ ಜಿ.ಬಿ. | ಬಿ.ಜೆ.ಪಿ. | ತುಮಕೂರು ನಗರ | ತುಮಕೂರು | 3 | |
| 133 | ಶ್ರೀ ಗೌರಿಶಂಕರ ಸ್ವಾಮಿ | ಜೆ.ಡಿ.ಎಸ್. | ತುಮಕೂರು ಗ್ರಾ | ತುಮಕೂರು | 39 | |
| 134 | ಶ್ರೀ ಮಸಾಲೆ ಜಯರಾಂ | ಬಿ.ಜೆ.ಪಿ. | ತುರುವೇಕೆರೆ | ತುಮಕೂರು | 38 | 2 |
| 135 | ಶ್ರೀ ನಾಗೇಶ್ ಬಿ.ಸಿ. * | ಬಿ.ಜೆ.ಪಿ. | ತಿಪಟೂರು | ತುಮಕೂರು | 24 | |
| 136 | ಶ್ರೀ ಸುರೇಶ್ ಗೌಡ | ಜೆ.ಡಿ.ಎಸ್. | ನಾಗಮಂಗಲ | ಮಂಡ್ಯ | 79 | 3 |
| 137 | ಶ್ರೀ ರವೀಂದ್ರ ಶ್ರೀಕಂಠಯ್ಯ | ಜೆ.ಡಿ.ಎಸ್. | ಶ್ರೀರಂಗಪಟ್ಟಣ | ಮಂಡ್ಯ | 23 | 2 |
| 138 | ಶ್ರೀ ಅನ್ನದಾನಿ | ಜೆ.ಡಿ.ಎಸ್. | ಮಳವಳ್ಳಿ | ಮಂಡ್ಯ | 21 | 2 |
| 139 | ಶ್ರೀ ಶ್ರೀನಿವಾಸ್ ಎಂ. | ಜೆ.ಡಿ.ಎಸ್. | ಮಂಡ್ಯ | ಮಂಡ್ಯ | 92 | 2 |

| ಕ್ರ.ಸಂ. | ಶಾಸಕರ ಹೆಸರು | ಪಕ್ಷ | ಕ್ಷೇತ್ರ | ಜಿಲ್ಲೆ | ಒಟ್ಟು ಪ್ರಶ್ನೆಗಳು | ಮಕ್ಕಳ ಕೇಂದ್ರಿತ ಪ್ರಶ್ನೆಗಳು |
|---|---|---|---|---|---|---|
| 140 | ಶ್ರೀ ತಮ್ಮಣ್ಣ ಡಿ.ಎಸ್. | ಜೆ.ಡಿ.ಎಸ್. | ಮದ್ದೂರು | ಮಂಡ್ಯ | 7 | |
| 141 | ಶ್ರೀ ಪುಟ್ಟರಾಜು ಸಿ.ಎಸ್. | ಜೆ.ಡಿ.ಎಸ್. | ಮೇಲುಕೋಟೆ | ಮಂಡ್ಯ | | |
| 142 | ಶ್ರೀ ನಾರಾಯಣಗೌಡ ಕೆ.ಸಿ.* | ಬಿ.ಜೆ.ಪಿ | ಕೃಷ್ಣರಾಜ ಪೇಟೆ | ಮಂಡ್ಯ | | |
| 143 | ಶ್ರೀ ಮಹದೇವ ಕೆ. | ಜೆ.ಡಿ.ಎಸ್. | ಪಿರಿಯಾಪಟ್ಟಣ | ಮೈಸೂರು | 86 | 2 |
| 144 | ಶ್ರೀ ಹರ್ಷವರ್ಧನ್ | ಬಿ.ಜೆ.ಪಿ. | ನಂಜನಗೂಡು | ಮೈಸೂರು | 32 | 2 |
| 145 | ಶ್ರೀ ತನ್ವೀರ್ ಸೇಠ್ | ಕಾಂಗ್ರೆಸ್ | ನರಸಿಂಹರಾಜ | ಮೈಸೂರು | 28 | 4 |
| 146 | ಶ್ರೀ ಯತೀಂದ್ರ ಸಿದ್ದರಾಮಯ್ಯ | ಕಾಂಗ್ರೆಸ್ | ವರುಣ | ಮೈಸೂರು | 103 | |
| 147 | ಶ್ರೀ ಅನಿಲ್ ಕುಮಾರ್ ಸಿ. | ಕಾಂಗ್ರೆಸ್ | ಎಚ್.ಡಿ. ಕೋಟೆ | ಮೈಸೂರು | 84 | 4 |
| 148 | ಶ್ರೀ ಅಶ್ವಿನ್ ಕುಮಾರ್ ಎಂ. | ಜೆ.ಡಿ.ಎಸ್. | ಟಿ.ನರಸೀಪುರ | ಮೈಸೂರು | 10 | 1 |
| 149 | ಶ್ರೀ ಮಂಜುನಾಥ್ ಹೆಚ್.ಪಿ. | ಕಾಂಗ್ರೆಸ್ | ಹುಣಸೂರು | ಮೈಸೂರು | 85 | 1 |
| 150 | ಶ್ರೀ ಮಹೇಶ್ ಸಾ.ರಾ. | ಜೆ.ಡಿ.ಎಸ್. | ಕೃಷ್ಣರಾಜನಗರ | ಮೈಸೂರು | 15 | 1 |
| 151 | ಶ್ರೀ ರಾಮದಾಸ್ ಎಸ್.ಎ. | ಬಿ.ಜೆ.ಪಿ. | ಕೃಷ್ಣರಾಜ | ಮೈಸೂರು | 54 | 1 |
| 152 | ಶ್ರೀ ದೇವೇಗೌಡ ಜಿ.ಟಿ. | ಜೆ.ಡಿ.ಎಸ್. | ಚಾಮುಂಡೇಶ್ವರಿ | ಮೈಸೂರು | 19 | |
| 153 | ಶ್ರೀ ನಾಗೇಂದ್ರ ಎಲ್. | ಬಿ.ಜೆ.ಪಿ. | ಚಾಮರಾಜ | ಮೈಸೂರು | 32 | 2 |
| 154 | ಶ್ರೀ ರಾಜೇಗೌಡ ಟಿ.ಡಿ. | ಕಾಂಗ್ರೆಸ್ | ಶೃಂಗೇರಿ | ಚಿಕ್ಕಮಗಳೂರು | 129 | 7 |
| 155 | ಶ್ರೀ ಕುಮಾರಸ್ವಾಮಿ ಎಂ.ಪಿ. | ಬಿ.ಜೆ.ಪಿ. | ಮೂಡಿಗೆರೆ | ಚಿಕ್ಕಮಗಳೂರು | 25 | 1 |
| 156 | ಶ್ರೀ ರವಿ ಸಿ.ಟಿ. | ಬಿ.ಜೆ.ಪಿ. | ಚಿಕ್ಕಮಗಳೂರು | ಚಿಕ್ಕಮಗಳೂರು | 18 | 1 |
| 157 | ಶ್ರೀ ಬೆಳ್ಳಿ ಪ್ರಕಾಶ್ | ಬಿ.ಜೆ.ಪಿ. | ಕಡೂರು | ಚಿಕ್ಕಮಗಳೂರು | 50 | 2 |
| 158 | ಶ್ರೀ ಸುರೇಶ್ ಡಿ.ಎಸ್. | ಬಿ.ಜೆ.ಪಿ. | ತರೀಕೆರೆ | ಚಿಕ್ಕಮಗಳೂರು | 2 | |
| 159 | ಶ್ರೀ ಸುಕುಮಾರ ಶೆಟ್ಟಿ | ಬಿ.ಜೆ.ಪಿ. | ಬೈಂದೂರು | ಉಡುಪಿ | 107 | 3 |
| 160 | ಶ್ರೀ ರಘುಪತಿ ಭಟ್ | ಬಿ.ಜೆ.ಪಿ. | ಉಡುಪಿ | ಉಡುಪಿ | 101 | 4 |
| 161 | ಶ್ರೀ ಲಾಲಾಜಿ ಆರ್. ಮೆಂಡನ್ | ಬಿ.ಜೆ.ಪಿ. | ಕಾಪು | ಉಡುಪಿ | 32 | 2 |
| 162 | ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ | ಬಿ.ಜೆ.ಪಿ. | ಕುಂದಾಪುರ | ಉಡುಪಿ | 29 | 3 |
| 163 | ಶ್ರೀ ಸುನೀಲ್ ಕುಮಾರ್* | ಬಿ.ಜೆ.ಪಿ. | ಕಾರ್ಕಳ | ಉಡುಪಿ | | |
| 164 | ಶ್ರೀ ಲಿಂಗೇಶ್ ಕೆ.ಎಸ್. | ಜೆ.ಡಿ.ಎಸ್. | ಬೇಲೂರು | ಹಾಸನ | 127 | 3 |
| 165 | ಶ್ರೀ ಕುಮಾರಸ್ವಾಮಿ ಎಚ್.ಕೆ. | ಜೆ.ಡಿ.ಎಸ್. | ಸಕಲೇಶಪುರ | ಹಾಸನ | 113 | 3 |
| 166 | ಶ್ರೀ ಬಾಲಕೃಷ್ಣ ಸಿ.ಎನ್. | ಜೆ.ಡಿ.ಎಸ್. | ಶ್ರವಣಬೆಳಗೊಳ | ಹಾಸನ | 128 | 4 |
| 167 | ಶ್ರೀ ಶಿವಲಿಂಗೇಗೌಡ ಕೆ.ಎಂ. | ಜೆ.ಡಿ.ಎಸ್. | ಅರಸೀಕೆರೆ | ಹಾಸನ | 88 | 5 |
| 168 | ಶ್ರೀ ರಾಮಸ್ವಾಮಿ ಎ.ಟಿ. | ಜೆ.ಡಿ.ಎಸ್. | ಅರಕಲಗೂಡು | ಹಾಸನ | 20 | |
| 169 | ಶ್ರೀ ಪ್ರೀತಂಗೌಡ ಜೆ. | ಬಿ.ಜೆ.ಪಿ. | ಹಾಸನ | ಹಾಸನ | | |
| 170 | ಶ್ರೀ ರೇವಣ್ಣ ಎಚ್.ಡಿ. | ಜೆ.ಡಿ.ಎಸ್. | ಹೊಳೆನರಸೀಪುರ | ಹಾಸನ | 149 | 10 |
| 171 | ಶ್ರೀ ಬೋಪಯ್ಯ ಕೆ.ಜಿ. | ಬಿ.ಜೆ.ಪಿ. | ವಿರಾಜಪೇಟೆ | ಕೊಡಗು | | |
| 172 | ಶ್ರೀ ಅಪ್ಪಚ್ಚು (ರಂಜನ್) ಎಂ.ಪಿ. | ಬಿ.ಜೆ.ಪಿ. | ಮಡಿಕೇರಿ | ಕೊಡಗು | 88 | 2 |
| 173 | ಶ್ರೀ ನರೇಂದ್ರ ಆರ್. | ಕಾಂಗ್ರೆಸ್ | ಹನೂರು | ಚಾಮರಾಜನಗರ | 84 | 3 |
| 174 | ಶ್ರೀ ಮಹೇಶ್ ಎನ್. | ಬಿ.ಎಸ್.ಪಿ. | ಕೊಳ್ಳೇಗಾಲ | ಚಾಮರಾಜನಗರ | 18 | |

| ಕ್ರ.ಸಂ. | ಶಾಸಕರ ಹೆಸರು | ಪಕ್ಷ | ಕ್ಷೇತ್ರ | ಜಿಲ್ಲೆ | ಒಟ್ಟು ಪ್ರಶ್ನೆಗಳು | ಮಕ್ಕಳ ಕೇಂದ್ರಿತ ಪ್ರಶ್ನೆಗಳು |
|---|---|---|---|---|---|---|
| 175 | ಶ್ರೀ ನಿರಂಜನ್‌ಕುಮಾರ್ | ಬಿ.ಜೆ.ಪಿ. | ಗುಂಡ್ಲುಪೇಟೆ | ಚಾಮರಾಜನಗರ | 28 | 1 |
| 176 | ಶ್ರೀ ಪುಟ್ಟರಂಗಶೆಟ್ಟಿ ಸಿ. | ಕಾಂಗ್ರೆಸ್ | ಚಾಮರಾಜನಗರ | ಚಾಮರಾಜನಗರ | 77 | 2 |
| 177 | ಶ್ರೀ ಹರೀಶ್ ಪೂಂಜ | ಬಿ.ಜೆ.ಪಿ. | ಬೆಳ್ತಂಗಡಿ | ದಕ್ಷಿಣ ಕನ್ನಡ | 6 | |
| 178 | ಶ್ರೀ ಅಂಗಾರ ಎಸ್.* | ಬಿ.ಜೆ.ಪಿ. | ಸುಳ್ಯ | ದಕ್ಷಿಣ ಕನ್ನಡ | 8 | |
| 179 | ಶ್ರೀ ಸಂಜೀವ ಮಟಂದೂರು | ಬಿ.ಜೆ.ಪಿ. | ಪುತ್ತೂರು | ದಕ್ಷಿಣ ಕನ್ನಡ | 81 | 6 |
| 180 | ಶ್ರೀ ರಾಜೇಶ್ ನಾಯ್ಕ್ | ಬಿ.ಜೆ.ಪಿ. | ಬಂಟ್ವಾಳ | ದಕ್ಷಿಣ ಕನ್ನಡ | 47 | |
| 181 | ಶ್ರೀ ಉಮಾನಾಥ ಕೋಟ್ಯಾನ್ | ಬಿ.ಜೆ.ಪಿ. | ಮೂಡಬಿದರೆ | ದಕ್ಷಿಣ ಕನ್ನಡ | 109 | 5 |
| 182 | ಶ್ರೀ ಖಾದರ್ ಯು.ಟಿ. | ಕಾಂಗ್ರೆಸ್ | ಮಂಗಳೂರು | ದಕ್ಷಿಣ ಕನ್ನಡ | 118 | 7 |
| 183 | ಶ್ರೀ ಭರತ್ ಶೆಟ್ಟಿ ವೈ | ಬಿ.ಜೆ.ಪಿ. | ಮಂಗಳೂರು ಉತ್ತರ | ದಕ್ಷಿಣ ಕನ್ನಡ | 45 | |
| 184 | ಶ್ರೀ ವೇದವ್ಯಾಸ ಕಾಮತ್ | ಬಿ.ಜೆ.ಪಿ. | ಮಂಗಳೂರು ದಕ್ಷಿಣ | ದಕ್ಷಿಣ ಕನ್ನಡ | 52 | 7 |
| 185 | ಶ್ರೀ ತುಕಾರಾಮ್ ಇ | ಕಾಂಗ್ರೆಸ್ | ಸಂಡೂರು | ಬಳ್ಳಾರಿ | 27 | 2 |
| 186 | ಶ್ರೀ ಆನಂದ ಸಿಂಗ್ * | ಬಿ.ಜೆ.ಪಿ. | ವಿಜಯನಗರ | ಬಳ್ಳಾರಿ | | |
| 187 | ಶ್ರೀ ಸೋಮಶೇಖರ ರೆಡ್ಡಿ ಜಿ. | ಬಿ.ಜೆ.ಪಿ. | ಬಳ್ಳಾರಿ ನಗರ | ಬಳ್ಳಾರಿ | 5 | |
| 188 | ಶ್ರೀ ನಾಗೇಂದ್ರ ಬಿ. | ಕಾಂಗ್ರೆಸ್ | ಬಳ್ಳಾರಿ ಗ್ರಾ | ಬಳ್ಳಾರಿ | 47 | |
| 189 | ಶ್ರೀ ಸೋಮಲಿಂಗಪ್ಪ ಎಂ.ಎಸ್. | ಬಿ.ಜೆ.ಪಿ. | ಸಿರಗುಪ್ಪ | ಬಳ್ಳಾರಿ | 33 | |
| 190 | ಶ್ರೀ ಪರಮೇಶ್ವರ ನಾಯ್ಕ ಪಿ.ಟಿ. | ಬಿ.ಜೆ.ಪಿ. | ಹಡಗಲಿ | ಬಳ್ಳಾರಿ | 17 | |
| 191 | ಶ್ರೀ ಭೀಮಾನಾಯ್ಕ | ಕಾಂಗ್ರೆಸ್ | ಹಗರಿಬೊಮ್ಮನಹಳ್ಳಿ | ಬಳ್ಳಾರಿ | 51 | 3 |
| 192 | ಶ್ರೀ ಗಣೇಶ್ ಜೆ.ಎನ್ | ಕಾಂಗ್ರೆಸ್ | ಕಂಪ್ಲಿ | ಬಳ್ಳಾರಿ | 31 | 2 |
| 193 | ಶ್ರೀ ಗೋಪಾಲಕೃಷ್ಣ ಎನ್.ವೈ | ಬಿ.ಜೆ.ಪಿ. | ಕೂಡ್ಲಿಗಿ | ಬಳ್ಳಾರಿ | | |
| 194 | ಶ್ರೀ ಈಶ್ವರ ಖಂಡ್ರೆ | ಕಾಂಗ್ರೆಸ್ | ಭಾಲ್ಕಿ | ಬೀದರ್ | 113 | 3 |
| 195 | ಶ್ರೀ ಶರಣು ಸಲಗಾರ್ | ಬಿ.ಜೆ.ಪಿ. | ಬಸವಕಲ್ಯಾಣ | ಬೀದರ್ | 8 | 1 |
| 196 | ಶ್ರೀ ರಹೀಮ್ ಖಾನ್ | ಕಾಂಗ್ರೆಸ್ | ಬೀದರ್ ಉತ್ತರ | ಬೀದರ್ | | |
| 197 | ಶ್ರೀ ಬಂಡೆಪ್ಪ ಕಾಶೆಂಪುರ | ಜೆ.ಡಿ.ಎಸ್. | ಬೀದರ್ ದಕ್ಷಿಣ | ಬೀದರ್ | 126 | 6 |
| 198 | ಶ್ರೀ ರಾಜಶೇಖರ್ ಪಾಟೀಲ್ | ಕಾಂಗ್ರೆಸ್ | ಹುಮನಾಬಾದ್ | ಬೀದರ್ | 5 | |
| 199 | ಶ್ರೀ ಪ್ರಭು ಚವ್ಹಾಣ್* | ಬಿ.ಜೆ.ಪಿ. | ಔರಾದ್ | ಬೀದರ್ | | |
| 200 | ಶ್ರೀ ನರಸಿಂಹ ನಾಯಕ | ಬಿ.ಜೆ.ಪಿ. | ಸುರಪುರ | ಯಾದಗಿರಿ | | |
| 201 | ಶ್ರೀ ಶರಣಬಸಪ್ಪಗೌಡ ದರ್ಶನಾಪುರ | ಕಾಂಗ್ರೆಸ್ | ಶಹಾಪುರ | ಯಾದಗಿರಿ | 8 | |
| 202 | ಶ್ರೀ ವೆಂಕಟರೆಡ್ಡಿ ಮುದ್ನಾಳ್ | ಬಿ.ಜೆ.ಪಿ. | ಯಾದಗಿರಿ | ಯಾದಗಿರಿ | 72 | 4 |
| 203 | ಶ್ರೀ ನಾಗನಗೌಡ ಕಂದಕೂರ | ಜೆ.ಡಿ.ಎಸ್. | ಗುರುಮಿಠಕಲ್ | ಯಾದಗಿರಿ | 8 | |
| 204 | ಶ್ರೀ ಹೊಲಗೇರಿ ಡಿ.ಎಸ್. | ಬಿ.ಜೆ.ಪಿ. | ಲಿಂಗಸೂಗೂರು | ರಾಯಚೂರು | 84 | 6 |
| 205 | ಶ್ರೀ ವೆಂಕಟರಾವ್ ನಾಡಗೌಡ | ಜೆ.ಡಿ.ಎಸ್. | ಸಿಂಧನೂರು | ರಾಯಚೂರು | 47 | |
| 206 | ಶ್ರೀ ಪ್ರತಾಪಗೌಡ ಪಾಟೀಲ್ | ಕಾಂಗ್ರೆಸ್ | ಮಸ್ಕಿ | ರಾಯಚೂರು | 10 | |
| 207 | ಶ್ರೀ ರಾಜಾ ವೆಂಕಟಪ್ಪ ನಾಯಕ | ಜೆ.ಡಿ.ಎಸ್. | ಮಾನ್ವಿ | ರಾಯಚೂರು | 27 | |
| 208 | ಡಾ. ಶಿವರಾಜ ಪಾಟೀಲ್ | ಬಿ.ಜೆ.ಪಿ. | ರಾಯಚೂರು ನಗರ | ರಾಯಚೂರು | | |
| 209 | ಶ್ರೀ ಬಸನಗೌಡ ದದ್ದಲ | ಬಿ.ಜೆ.ಪಿ. | ರಾಯಚೂರು ಗ್ರಾ | ರಾಯಚೂರು | 93 | 3 |

| ಕ್ರ.ಸಂ. | ಶಾಸಕರ ಹೆಸರು | ಪಕ್ಷ | ಕ್ಷೇತ್ರ | ಜಿಲ್ಲೆ | ಒಟ್ಟು ಪ್ರಶ್ನೆಗಳು | ಮಕ್ಕಳ ಕೇಂದ್ರಿತ ಪ್ರಶ್ನೆಗಳು |
|---|---|---|---|---|---|---|
| 210 | ಶ್ರೀ ಶಿವನಗೌಡ ನಾಯಕ ಕೆ. | ಬಿ.ಜೆ.ಪಿ. | ದೇವದುರ್ಗ | ರಾಯಚೂರು | | |
| 211 | ಶ್ರೀ ರಾಜಕುಮಾರ ಪಿ. ತೆಲ್ಕೂರ್ | ಬಿ.ಜೆ.ಪಿ. | ಸೇಡಂ | ಕಲಬುರುಗಿ | 10 | 2 |
| 212 | ಡಾ. ಅವಿನಾಶ ಉಮೇಶ್ ಜಾಧವ್ | ಬಿ.ಜೆ.ಪಿ. | ಚಿಂಚೋಳಿ | ಕಲಬುರುಗಿ | 49 | 2 |
| 213 | ಶ್ರೀ ಪ್ರಿಯಾಂಕ ಖರ್ಗೆ ಎಂ. | ಕಾಂಗ್ರೆಸ್ | ಚಿತ್ತಾಪುರ | ಕಲಬುರುಗಿ | 60 | 2 |
| 214 | ಶ್ರೀ ಪಾಟೀಲ್ ಎಂ.ವೈ | ಕಾಂಗ್ರೆಸ್ | ಅಫಜಲಪುರ | ಕಲಬುರುಗಿ | 23 | 2 |
| 215 | ಶ್ರೀ ಸುಭಾಷ ಗುತ್ತೇದಾರ್ | ಬಿ.ಜೆ.ಪಿ. | ಆಳಂದ | ಕಲಬುರುಗಿ | 41 | |
| 216 | ಶ್ರೀ ಅಜಯಸಿಂಗ್ | ಕಾಂಗ್ರೆಸ್ | ಜೇವರ್ಗಿ | ಕಲಬುರುಗಿ | 135 | 8 |
| 217 | ಶ್ರೀ ಬಸವರಾಜ ಮತ್ತಿಮೂಡ | ಬಿ.ಜೆ.ಪಿ. | ಕಲಬುರುಗಿ ಗ್ರಾ | ಕಲಬುರುಗಿ | 19 | |
| 218 | ಶ್ರೀ ದತ್ತಾತ್ರೇಯ ಪಾಟೀಲ್ ರೇವೂರ | ಬಿ.ಜೆ.ಪಿ. | ಕಲಬುರುಗಿ ದಕ್ಷಿಣ | ಕಲಬುರುಗಿ | | |
| 219 | ಶ್ರೀಮತಿ ಕನೀಜ್ ಫಾತಿಮಾ | ಕಾಂಗ್ರೆಸ್ | ಕಲಬುರಗಿ ಉತ್ತರ | ಕಲಬುರುಗಿ | 4 | 1 |
| 220 | ಶ್ರೀ ಹಾಲಪ್ಪ ಬಸಪ್ಪ ಆಚಾರ್* | ಬಿ.ಜೆ.ಪಿ. | ಯಲಬುರ್ಗಾ | ಕೊಪ್ಪಳ | 71 | 4 |
| 221 | ಶ್ರೀ ಬಸವರಾಜ ದಢೇಸುಗೂರು | ಬಿ.ಜೆ.ಪಿ. | ಕನಕಗಿರಿ | ಕೊಪ್ಪಳ | 11 | 1 |
| 222 | ಶ್ರೀ ಅಮರೇಗೌಡ ಬಯ್ಯಾಪುರ | ಕಾಂಗ್ರೆಸ್ | ಕುಷ್ಟಗಿ | ಕೊಪ್ಪಳ | 50 | 3 |
| 223 | ಶ್ರೀ ರಾಘವೇಂದ್ರ ಹಿಟ್ನಾಳ್ | ಕಾಂಗ್ರೆಸ್ | ಕೊಪ್ಪಳ | ಕೊಪ್ಪಳ | 21 | |
| 224 | ಶ್ರೀ ಪರಣ್ಣ ಮುನವಳ್ಳಿ | ಬಿ.ಜೆ.ಪಿ. | ಗಂಗಾವತಿ | ಕೊಪ್ಪಳ | 18 | |
| 225 | ಶ್ರೀಮತಿ ವಿನಿಶಾ ನಿರೋ | ನಾಮನಿರ್ದೇಶಿತ | ನಾಮನಿರ್ದೇಶಿತ | | | |

* ಸಚಿವರು; ** ಮುಖ್ಯ ಮಂತ್ರಿಗಳು

## 2.9. ಕ್ಷೇತ್ರಾವಾರು ಪ್ರಶ್ನೆಗಳು – ವಿಧಾನಪರಿಷತ್

ವಿಧಾನಸಭಾ ಸದಸ್ಯರ ಹಾಗೆ ವಿಧಾನಪರಿಷತ್ ಸದಸ್ಯರಿಗೆ ಪ್ರತ್ಯೇಕವಾದ ಜಿಲ್ಲಾ ಮಟ್ಟದ ಕ್ಷೇತ್ರಗಳಿಲ್ಲದಿರುವುದರಿಂದ, ಅವರು ಚುನಾಯಿತರಾದ ಕ್ಷೇತ್ರಾವಾರು ಪ್ರಶ್ನೆಗಳನ್ನು ವಿಂಗಡಿಸಲಾಗಿದೆ.

ಅತಿ ಹೆಚ್ಚು ಪ್ರಶ್ನೆಗಳನ್ನು ಕೇಳಿರುವುದು 25 ಸದಸ್ಯರನ್ನು ಹೊಂದಿರುವ ಸ್ಥಳೀಯ ಸಂಸ್ಥೆಯನ್ನು ಪ್ರತಿನಿಧಿಸುವ ಸದಸ್ಯರು (1,993 ಪ್ರಶ್ನೆಗಳು) ನಂತರದ ಸ್ಥಾನದಲ್ಲಿ 25 ಸದಸ್ಯರನ್ನು ಹೊಂದಿರುವ ವಿಧಾನಸಭೆಯಿಂದ ಚುನಾಯಿತರಾದ ಪ್ರತಿನಿಧಿಗಳು (1,602 ಪ್ರಶ್ನೆಗಳು), ನಾಮ ನಿರ್ದೇಶನ ಹೊಂದಿರುವ 11 ಸದಸ್ಯರು (744 ಪ್ರಶ್ನೆಗಳು), ತಲಾ 7 ಪ್ರತಿನಿಧಿಗಳನ್ನು ಹೊಂದಿದ ಶಿಕ್ಷಕರ ಕ್ಷೇತ್ರ (548 ಪ್ರಶ್ನೆಗಳು) ಮತ್ತು ಪದವೀಧರ ಕ್ಷೇತ್ರದ ಪ್ರತಿನಿಧಿಗಳು (402 ಪ್ರಶ್ನೆಗಳು).

ಮಕ್ಕಳ ಕೇಂದ್ರಿತ ಪ್ರಶ್ನೆಗಳನ್ನು ಗಮನಿಸಿದರೆ ನಾಮನಿರ್ದೇಶನ ಹೊಂದಿರುವವರು ತಾವು ಕೇಳಿದ ಒಟ್ಟು ಪ್ರಶ್ನೆಯ ಶೇಕಡಾ 5.51ರಷ್ಟು ಮಕ್ಕಳ ಕೇಂದ್ರಿತ ಪ್ರಶ್ನೆಗಳನ್ನು ಕೇಳಿದ್ದರೆ, ಸ್ಥಳೀಯ ಸಂಸ್ಥೆಯ ಪ್ರತಿನಿಧಿಗಳು ಒಟ್ಟು ಪ್ರಶ್ನೆಯ ಶೇಕಡಾ 5.42ರಷ್ಟು, ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು ತಾವು ಕೇಳಿದ ಒಟ್ಟು ಪ್ರಶ್ನೆಯ ಶೇಕಡಾ 5.11ರಷ್ಟು, ವಿಧಾನಸಭೆಯಿಂದ ಆಯ್ಕೆಯಾದವರು ಒಟ್ಟು ಪ್ರಶ್ನೆಯ ಶೇಕಡಾ 4.74ರಷ್ಟು ಮತ್ತು ಪದವೀಧರ ಕ್ಷೇತ್ರದಿಂದ ಚುನಾಯಿತರಾದವರು ತಾವು ಕೇಳಿದ ಒಟ್ಟು ಪ್ರಶ್ನೆಯ ಶೇಕಡಾ 3.23ರಷ್ಟು ಮಕ್ಕಳ ಕೇಂದ್ರಿತ ಪ್ರಶ್ನೆಗಳನ್ನು ಕೇಳಿದ್ದಾರೆ.

| ಕ್ಷೇತ್ರ | ಸದಸ್ಯರ ಸಂಖ್ಯೆ | ಕೇಳಿದ ಒಟ್ಟು ಪ್ರಶ್ನೆಗಳು | ಮಕ್ಕಳ ಕೇಂದ್ರಿತ ಪ್ರಶ್ನೆಗಳು | ಒಟ್ಟು ಪ್ರಶ್ನೆಯ % |
|---|---|---|---|---|
| ಸ್ಥಳೀಯ ಸಂಸ್ಥೆಗಳ ಕ್ಷೇತ್ರ | 25 | 1,993 | 108 | 5.42 |
| ವಿಧಾನಸಭೆಯಿಂದ | 25 | 1,602 | 76 | 4.74 |
| ಚುನಾಯಿತರಾದವರು ನಾಮನಿರ್ದೇಶನ | 11 | 744 | 41 | 5.51 |
| ಶಿಕ್ಷಕರ ಕ್ಷೇತ್ರ* | 7 | 548 | 28 | 5.11 |
| ಪದವೀಧರ ಕ್ಷೇತ್ರ | 7 | 402 | 13 | 3.23 |
| **ಒಟ್ಟು** | **75** | **5,289** | **266** | **5.03** |

* ಶಿಕ್ಷಕರ ಕ್ಷೇತ್ರದಿಂದ ಆಯ್ಕೆಯಾಗಿರುವ ಒಬ್ಬರು ಸಭಾಪತಿಗಳಾಗಿರುವುದರಿಂದ ಅವರು ಯಾವುದೇ ಪಕ್ಷವನ್ನು ಪ್ರತಿನಿಧಿಸುವುದಿಲ್ಲ.

## 2.10. ಸದಸ್ಯಾವಾರು ಪ್ರಶ್ನೆಗಳು – ವಿಧಾನಪರಿಷತ್

| ಕ್ರಮ ಸಂಖ್ಯೆ | ಹೆಸರು | ಪಕ್ಷ | ಕ್ಷೇತ್ರ | ಕೇಳಿದ ಒಟ್ಟು ಪ್ರಶ್ನೆಗಳು | ಮಕ್ಕಳ ಕೇಂದ್ರಿತ ಪ್ರಶ್ನೆಗಳು |
|---|---|---|---|---|---|
| 1 | ಶ್ರೀ ವಿವೇಕರಾವ್ ವಸಂತರಾವ್ ಪಾಟೀಲ್ | ಪಕ್ಷೇತರ | ಸ್ಥಳೀಯ ಸಂಸ್ಥೆ | 6 | |
| 2 | ಶ್ರೀ ಪಾಟೀಲ್ ಬಿ.ಜಿ | ಬಿ.ಜೆ.ಪಿ | ಸ್ಥಳೀಯ ಸಂಸ್ಥೆ | 79 | |
| 3 | ಶ್ರೀ ಪ್ರತಾಪಚಂದ್ರ ಶೆಟ್ಟಿ ಕೆ | ಕಾಂಗ್ರೆಸ್ | ಸ್ಥಳೀಯ ಸಂಸ್ಥೆ | 107 | 3 |
| 4 | ಶ್ರೀ ಧರ್ಮಸೇನ್ ಆರ್ | ಕಾಂಗ್ರೆಸ್ | ಸ್ಥಳೀಯ ಸಂಸ್ಥೆ | 137 | 10 |
| 5 | ಶ್ರೀ ಪಾಟೀಲ್ ಎಸ್.ಆರ್ | ಕಾಂಗ್ರೆಸ್ | ಸ್ಥಳೀಯ ಸಂಸ್ಥೆ | 29 | |
| 6 | ಶ್ರೀ ಪ್ರಸನ್ನ ಕುಮಾರ್ ಆರ್ | ಕಾಂಗ್ರೆಸ್ | ಸ್ಥಳೀಯ ಸಂಸ್ಥೆ | 106 | 8 |
| 7 | ಶ್ರೀ ಸುನೀಲ್ ಸುಬ್ರಮಣಿ ಪಿ.ಎಂ | ಬಿ.ಜೆ.ಪಿ | ಸ್ಥಳೀಯ ಸಂಸ್ಥೆ | 94 | 2 |
| 8 | ಶ್ರೀ ಪ್ರದೀಪ್ ಶೆಟ್ಟರ್ | ಬಿ.ಜೆ.ಪಿ | ಸ್ಥಳೀಯ ಸಂಸ್ಥೆ | 27 | 1 |
| 9 | ಶ್ರೀ ಪ್ರಾಣೇಶ್ ಎಂ.ಕೆ | ಬಿ.ಜೆ.ಪಿ | ಸ್ಥಳೀಯ ಸಂಸ್ಥೆ | 7 | |
| 10 | ಶ್ರೀ ಕವಟಗಿಮಠ ಮಹಾಂತೇಶ್ ಮಲ್ಲಿಕಾರ್ಜುನ | ಬಿ.ಜೆ.ಪಿ | ಸ್ಥಳೀಯ ಸಂಸ್ಥೆ | 187 | 36 |
| 11 | ಶ್ರೀ ಕೋಟ ಶ್ರೀನಿವಾಸ ಪೂಜಾರಿ | ಬಿ.ಜೆ.ಪಿ | ಸ್ಥಳೀಯ ಸಂಸ್ಥೆ | ಸಚಿವರು | |
| 12 | ಶ್ರೀ ಸಂದೇಶ್ ನಾಗರಾಜ್ | ಜೆ.ಡಿ.ಎಸ್ | ಸ್ಥಳೀಯ ಸಂಸ್ಥೆ | 89 | 1 |
| 13 | ಶ್ರೀ ಅಪ್ಪಾಜಿಗೌಡ ಎನ್ | ಜೆ.ಡಿ.ಎಸ್ | ಸ್ಥಳೀಯ ಸಂಸ್ಥೆ | 194 | 6 |
| 14 | ಶ್ರೀ ಕಾಂತರಾಜ್ ಬಿ.ಎಂ.ಎಲ್ | ಜೆ.ಡಿ.ಎಸ್ | ಸ್ಥಳೀಯ ಸಂಸ್ಥೆ | 128 | 4 |
| 15 | ಶ್ರೀ ಮನೋಹರ್ ಸಿ.ಆರ್. | ಜೆ.ಡಿ.ಎಸ್. | ಸ್ಥಳೀಯ ಸಂಸ್ಥೆ | 19 | |
| 16 | ಶ್ರೀ ನಾರಾಯಣಸ್ವಾಮಿ ಎಂ | ಕಾಂಗ್ರೆಸ್ | ಸ್ಥಳೀಯ ಸಂಸ್ಥೆ | 179 | 10 |
| 17 | ಶ್ರೀ ಮಾನೆ ಶ್ರೀನಿವಾಸ್ | ಕಾಂಗ್ರೆಸ್ | ಸ್ಥಳೀಯ ಸಂಸ್ಥೆ | 46 | 1 |
| 18 | ಶ್ರೀ ರವಿ ಎಸ್ | ಕಾಂಗ್ರೆಸ್ | ಸ್ಥಳೀಯ ಸಂಸ್ಥೆ | 87 | 3 |
| 19 | ಶ್ರೀ ಕೊಂಡಯ್ಯ ಕೆ.ಸಿ | ಕಾಂಗ್ರೆಸ್ | ಸ್ಥಳೀಯ ಸಂಸ್ಥೆ | 46 | 3 |
| 20 | ಶ್ರೀ ಗೋಪಾಲಸ್ವಾಮಿ ಎಂ.ಎ | ಕಾಂಗ್ರೆಸ್ | ಸ್ಥಳೀಯ ಸಂಸ್ಥೆ | 174 | 5 |
| 21 | ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ | ಕಾಂಗ್ರೆಸ್ | ಸ್ಥಳೀಯ ಸಂಸ್ಥೆ | 60 | 4 |
| 22 | ಶ್ರೀ ರಘು ಅಚಾರ್ ಜಿ. | ಕಾಂಗ್ರೆಸ್ | ಸ್ಥಳೀಯ ಸಂಸ್ಥೆ | 39 | 2 |
| 23 | ಶ್ರೀ ಬಸವರಾಜ ಪಾಟೀಲ್ ಇಟಗಿ | ಕಾಂಗ್ರೆಸ್ | ಸ್ಥಳೀಯ ಸಂಸ್ಥೆ | 59 | 1 |
| 24 | ಶ್ರೀ ಸುನೀಲ್‌ಗೌಡ ಬಸನಗೌಡ ಪಾಟೀಲ್ | ಕಾಂಗ್ರೆಸ್ | ಸ್ಥಳೀಯ ಸಂಸ್ಥೆ | 1 | |
| 25 | ಶ್ರೀ ವಿಜಯ ಸಿಂಗ್ | ಕಾಂಗ್ರೆಸ್ | ಸ್ಥಳೀಯ ಸಂಸ್ಥೆ | 94 | 8 |
| 26 | ಶ್ರೀ ಶಾಂತಾರಾಮ್ ಬುಡ್ನ ಸಿದ್ಧಿ | ಬಿ.ಜೆ.ಪಿ | ನಾಮನಿರ್ದೇಶನ | 5 | |
| 27 | ಶ್ರೀ ಅಡಗೂರು ಹೆಚ್. ವಿಶ್ವನಾಥ | ಬಿ.ಜೆ.ಪಿ | ನಾಮನಿರ್ದೇಶನ | 11 | |
| 28 | ಶ್ರೀಮತಿ ಭಾರತಿ ಶೆಟ್ಟಿ | ಬಿ.ಜೆ.ಪಿ | ನಾಮನಿರ್ದೇಶನ | 37 | 6 |
| 29 | ಶ್ರೀ ತಳವಾರ್ ಸಾಬಣ್ಣ | ಬಿ.ಜೆ.ಪಿ | ನಾಮನಿರ್ದೇಶನ | 11 | |
| 30 | ಶ್ರೀ ಲಕ್ಷ್ಮಣ ಸಂಗಪ್ಪ ಸವದಿ | ಬಿ.ಜೆ.ಪಿ. | ನಾಮನಿರ್ದೇಶನ | | |
| 31 | ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ | ಕಾಂಗ್ರೆಸ್ | ನಾಮನಿರ್ದೇಶನ | 55 | 3 |
| 32 | ಶ್ರೀ ವೆಂಕಟೇಶ್ ಯು.ಬಿ | ಕಾಂಗ್ರೆಸ್ | ನಾಮನಿರ್ದೇಶನ | 126 | 13 |

| ಕ್ರಮ ಸಂಖ್ಯೆ | ಹೆಸರು | ಪಕ್ಷ | ಕ್ಷೇತ್ರ | ಕೇಳಿದ ಒಟ್ಟು ಪ್ರಶ್ನೆಗಳು | ಮಕ್ಕಳ ಕೇಂದ್ರಿತ ಪ್ರಶ್ನೆಗಳು |
|---|---|---|---|---|---|
| 33 | ಶ್ರೀ ತಿಪ್ಪೇಸ್ವಾಮಿ ಕೆ.ಎ | ಜೆ.ಡಿ.ಎಸ್. | ನಾಮನಿರ್ದೇಶನ | 148 | 10 |
| 34 | ಶ್ರೀ ರಮೇಶ್ ಪಿ.ಆರ್ | ಕಾಂಗ್ರೆಸ್ | ನಾಮನಿರ್ದೇಶನ | 135 | 3 |
| 35 | ಶ್ರೀ ಪ್ರಕಾಶ್ ಕೆ ರಾಥೋಡ್ | ಕಾಂಗ್ರೆಸ್ | ನಾಮನಿರ್ದೇಶನ | 195 | 5 |
| 36 | ಶ್ರೀ ಲಿಂಗಪ್ಪ ಸಿ.ಎಂ | ಕಾಂಗ್ರೆಸ್ | ನಾಮನಿರ್ದೇಶನ | 15 | |
| 37 | ಶ್ರೀ ಆಯನೂರು ಮಂಜುನಾಥ | ಬಿ.ಜೆ.ಪಿ | ಪದವೀಧರ | 15 | 1 |
| 38 | ಶ್ರೀ ಚಿದಾನಂದ ಎಂ. ಗೌಡ | ಬಿ.ಜೆ.ಪಿ | ಪದವೀಧರ | 21 | 2 |
| 39 | ಶ್ರೀ ದೇವೇಗೌಡ ಅ. | ಬಿ.ಜೆ.ಪಿ | ಪದವೀಧರ | 55 | |
| 40 | ಶ್ರೀ ಸಂಕನೂರ ಎಸ್.ವ್ಹಿ. | ಬಿ.ಜೆ.ಪಿ | ಪದವೀಧರ | 26 | |
| 41 | ಶ್ರೀ ನಿರಾಣಿ ಹನುಮಂತ್ ರುದ್ರಪ್ಪ | ಬಿ.ಜೆ.ಪಿ | ಪದವೀಧರ | 71 | |
| 42 | ಶ್ರೀ ಶ್ರೀಕಂಠೇಗೌಡ ಕೆ.ಟಿ | ಜೆ.ಡಿ.ಎಸ್ | ಪದವೀಧರ | 142 | 4 |
| 43 | ಡಾ. ಚಂದ್ರಶೇಖರ್ ಪಾಟೀಲ್ ಬಿ | ಕಾಂಗ್ರೆಸ್ | ಪದವೀಧರ | 71 | 6 |
| 44 | ಶ್ರೀ ಯೋಗೇಶ್ವರ ಸಿ.ಪಿ. | ಬಿ.ಜೆ.ಪಿ | ವಿಧಾನಸಭೆ | 5 | 1 |
| 45 | ಶ್ರೀ ಶಂಕರ್ ಆರ್. | ಬಿ.ಜೆ.ಪಿ. | ವಿಧಾನಸಭೆ | | |
| 46 | ಶ್ರೀ ನಂಜುಂಡಿ ವಿಶ್ವಕರ್ಮ ಕೆ.ಪಿ | ಬಿ.ಜೆ.ಪಿ | ವಿಧಾನಸಭೆ | 14 | |
| 47 | ಶ್ರೀ ರವಿಕುಮಾರ್ ಎನ್ | ಬಿ.ಜೆ.ಪಿ | ವಿಧಾನಸಭೆ | 186 | 14 |
| 48 | ಶ್ರೀ ರುದ್ರೇಗೌಡ ಎಸ್ | ಬಿ.ಜೆ.ಪಿ | ವಿಧಾನಸಭೆ | 13 | |
| 49 | ಶ್ರೀ ರಘುನಾಥರಾವ್ ಮಲ್ಕಾಪೂರೆ | ಬಿ.ಜೆ.ಪಿ | ವಿಧಾನಸಭೆ | 122 | 8 |
| 50 | ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. | ಬಿ.ಜೆ.ಪಿ | ವಿಧಾನಸಭೆ | 12 | 2 |
| 51 | ಡಾ. ತೇಜಸ್ವಿನಿ ಗೌಡ | ಬಿ.ಜೆ.ಪಿ | ವಿಧಾನಸಭೆ | 20 | 2 |
| 52 | ಶ್ರೀ ಸುನಿಲ್ ವಲ್ಯಾಪುರ್ | ಬಿ.ಜೆ.ಪಿ | ವಿಧಾನಸಭೆ | 90 | 2 |
| 53 | ಶ್ರೀ ನಾಗರಾಜ್ ಎಂ.ಟಿ.ಬಿ. | ಬಿ.ಜೆ.ಪಿ. | ವಿಧಾನಸಭೆ | ಸಚಿವರು | |
| 54 | ಶ್ರೀ ನಾರಾಯಣಸ್ವಾಮಿ ಕೆ.ವಿ. | ಜೆ.ಡಿ.ಎಸ್ | ವಿಧಾನಸಭೆ | 3 | |
| 55 | ಶ್ರೀ ರಮೇಶ್‌ಗೌಡ ಹೆಚ್.ಎಂ | ಜೆ.ಡಿ.ಎಸ್ | ವಿಧಾನಸಭೆ | 181 | 7 |
| 56 | ಶ್ರೀ ಫಾರೂಕ್ ಬಿ.ಎಂ | ಜೆ.ಡಿ.ಎಸ್ | ವಿಧಾನಸಭೆ | 22 | 1 |
| 57 | ಶ್ರೀ ಗೋವಿಂದ ರಾಜು | ಜೆ.ಡಿ.ಎಸ್. | ವಿಧಾನಸಭೆ | | |
| 58 | ಶ್ರೀ ಇಬ್ರಾಹಿಂ ಸಿ.ಎಂ | ಕಾಂಗ್ರೆಸ್ | ವಿಧಾನಸಭೆ | 20 | 1 |
| 59 | ಶ್ರೀಮತಿ ವೀಣಾ ಅಚ್ಚಯ್ಯ ಎಸ್ | ಕಾಂಗ್ರೆಸ್ | ವಿಧಾನಸಭೆ | 143 | |
| 60 | ಶ್ರೀ ಅಲ್ಲಂ ವೀರಭದ್ರಪ್ಪ | ಕಾಂಗ್ರೆಸ್ | ವಿಧಾನಸಭೆ | 25 | 3 |
| 61 | ಶ್ರೀ ಅರವಿಂದ ಕುಮಾರ್ ಅರಳಿ | ಕಾಂಗ್ರೆಸ್ | ವಿಧಾನಸಭೆ | 169 | 10 |
| 62 | ಶ್ರೀ ಹರಿಪ್ರಸಾದ್ ಬಿ. ಕೆ. | ಕಾಂಗ್ರೆಸ್ | ವಿಧಾನಸಭೆ | 127 | 7 |
| 63 | ಶ್ರೀ ಹರೀಶ್‌ಕುಮಾರ್ ಕೆ | ಕಾಂಗ್ರೆಸ್ | ವಿಧಾನಸಭೆ | 89 | 3 |
| 64 | ಶ್ರೀ ಗೋವಿಂದರಾಜ್ ಕೆ | ಕಾಂಗ್ರೆಸ್ | ವಿಧಾನಸಭೆ | 116 | 3 |
| 65 | ಶ್ರೀ ತಿಮ್ಮಾಪೂರ ಆರ್.ಬಿ | ಕಾಂಗ್ರೆಸ್ | ವಿಧಾನಸಭೆ | 80 | 3 |

| ಕ್ರಮ ಸಂಖ್ಯೆ | ಹೆಸರು | ಪಕ್ಷ | ಕ್ಷೇತ್ರ | ಕೇಳಿದ ಒಟ್ಟು ಪ್ರಶ್ನೆಗಳು | ಮಕ್ಕಳ ಕೇಂದ್ರಿತ ಪ್ರಶ್ನೆಗಳು |
|---|---|---|---|---|---|
| 66 | ಶ್ರೀ ಮುನಿರಾಜು ಗೌಡ ಪಿ.ಎಂ. | ಬಿ.ಜೆ.ಪಿ | ವಿಧಾನಸಭೆ | 45 | 4 |
| 67 | ಶ್ರೀ ಲಹರ ಸಿಂಗ್ ಸಿರೋಯಾ | ಬಿ.ಜೆ.ಪಿ | ವಿಧಾನಸಭೆ | 33 | 4 |
| 68 | ಶ್ರೀ ನಸೀರ್ ಅಹ್ಮದ್ | ಕಾಂಗ್ರೆಸ್ | ವಿಧಾನಸಭೆ | 90 | 2 |
| 69 | ಶ್ರೀ ಶಶೀಲ್ ಜಿ. ನಮೋಶಿ | ಬಿ.ಜೆ.ಪಿ | ಶಿಕ್ಷಕರ | 59 | 4 |
| 70 | ಶ್ರೀ ಭೋಜೆಗೌಡ ಎಸ್.ಎಲ್ | ಜೆ.ಡಿ.ಎಸ್ | ಶಿಕ್ಷಕರ | 88 | 8 |
| 71 | ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ* | ಜೆ.ಡಿ.ಎಸ್ | ಶಿಕ್ಷಕರ | 30 | 1 |
| 72 | ಡಾ. ನಾರಾಯಣಸ್ವಾಮಿ ವೈ.ಎ | ಬಿ.ಜೆ.ಪಿ | ಶಿಕ್ಷಕರ | 166 | 9 |
| 73 | ಶ್ರೀ ಅರುಣ ಶಹಾಪುರ | ಬಿ.ಜೆ.ಪಿ | ಶಿಕ್ಷಕರ | 63 | 1 |
| 74 | ಶ್ರೀ ಪುಟ್ಟಣ್ಣ | ಬಿ.ಜೆ.ಪಿ. | ಶಿಕ್ಷಕರ | 11 | |
| 75 | ಶ್ರೀ ಮರಿತಿಬ್ಬೇಗೌಡ | ಜೆ.ಡಿ.ಎಸ್ | ಶಿಕ್ಷಕರ | 134 | 5 |
| | **ಒಟ್ಟು** | | | **5289** | **266** |

* ಸಭಾಪತಿಗಳು

## ವಿಧಾನಸಭೆ – ಆಯ್ದ ಪ್ರಶ್ನೆ ಮತ್ತು ಉತ್ತರಗಳು

**'ಸೃಷ್ಟಿ ಯೋಜನೆ ಕುರಿತು'**

**ದಿನಾಂಕ: 10–3–2021 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1434: – ಶ್ರೀ ರಾಜೇಗೌಡ ಟಿ.ಡಿ. (ಶೃಂಗೇರಿ)**

ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗು ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ಸಚಿವರು ದಯವಿಟ್ಟು ಇವುಗಳಿಗೆ ಉತ್ತರಿಸುವರೇ:

ಅ) ಸೃಷ್ಟಿ ಯೋಜನೆಯಡಿ ಗರ್ಭಿಣಿ/ಬಾಣಂತಿ ಫಲಾನುಭವಿಗಳಿಗೆ ಮೊಟ್ಟೆ ವಿತರಿಸಲು ಇದುವರೆಗೂ ಮುಂಗಡವಾಗಿ ಹಣ ವಿತರಿಸದೇ ಹಾಗು ಇಲಾಖೆಯೂ ಸಹ ಸರಬರಾಜು ಮಾಡದೇ ನಿರ್ಲಕ್ಷ್ಯ ವಹಿಸುತ್ತಿದ್ದು, ಅಂಗನವಾಡಿ ಕಾರ್ಯಕರ್ತೆಯರು ತಮ್ಮ ಕೈಯಿಂದ ಹಣ ನೀಡಿ ಮೊಟ್ಟೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಆಗಸ್ಟ್ 2020ರಿಂದ ಮೊಟ್ಟೆ ಬೆಲೆ ಹೆಚ್ಚಳವಾಗಿದ್ದು, ಸರ್ಕಾರ ಒಂದು ಮೊಟ್ಟೆಗೆ ನೀಡುತ್ತಿರುವ ರೂ.5/– ಮಾತ್ರ ನೀಡುತ್ತಿದ್ದು ಬೆಲೆ ಹೆಚ್ಚಳಕ್ಕನುಗುಣವಾಗಿ ಮೊಟ್ಟೆ ದರವನ್ನು ಹೆಚ್ಚಳ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಇ) ಅಂಗನವಾಡಿ ಕಾರ್ಯಕರ್ತೆಯರು ಹೆಚ್ಚುವರಿ ಹಣವನ್ನು ಕೈಯಿಂದ ನೀಡುತ್ತಿದ್ದು, 4 ತಿಂಗಳಿಗೊಮ್ಮೆ ಮೊಟ್ಟೆ ಹಣ ಬರುತ್ತಿರುವುದರಿಂದ ಶೀಘ್ರವಾಗಿ ಬಿಡುಗಡೆ ಮಾಡಲು ಇರುವ ತೊಡಕುಗಳೇನು;

ಈ) ಯಾವ ಕಾಲಮಿತಿಯೊಳಗೆ ಈ ಸಮಸ್ಯೆಗಳನ್ನು ಇತ್ಯರ್ಥಪಡಿಸಲಾಗುತ್ತದೆ?

**ಉತ್ತರಿಸಿದವರು : ಮಾನ್ಯ ಸಚಿವರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗು ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ**

ಅ) ಸೃಷ್ಟಿ ಯೋಜನೆಯಡಿ ಗರ್ಭಿಣಿ/ಬಾಣಂತಿ ಫಲಾನುಭವಿಗಳಿಗೆ ಮೊಟ್ಟೆ ವಿತರಿಸಲು ಇದುವರೆಗೂ ಮುಂಗಡವಾಗಿ ಹಣ ವಿತರಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಖಜಾನೆ–2 ತಂತ್ರಾಂಶಗಳ ಮೂಲಕ ಯೋಜನೆಯ ಅನುದಾನ ಬಿಡುಗಡೆಗೊಳಿಸಲಾಗುತ್ತಿದ್ದು, ಖಜಾನೆ–2ರಲ್ಲಿ ಮುಂಗಡ ಹಣ ಪಾವತಿಗೆ ಅವಕಾಶವಿರುವುದಿಲ್ಲ.

ಆ) ಅಂಗನವಾಡಿ ಕೇಂದ್ರದ ಫಲಾನುಭವಿಗಳಿಗೆ ಮೊಟ್ಟೆ ಖರೀದಿಸುವಲ್ಲಿ ಹೆಚ್ಚಾಗುವ ವ್ಯತ್ಯಾಸದ ಮೊತ್ತವನ್ನು ಜಿಲ್ಲಾ ವ್ಯಾಪ್ತಿಯಲ್ಲಿರುವ ಗ್ರಾಮ ಪಂಚಾಯಿತಿಯು ಸ್ವಂತ ಸಂಪನ್ಮೂಲದಿಂದ ಭರಿಸಲು ಈಗಾಗಲೇ ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗಳಿಗೆ ನಿರ್ದೇಶನ ನೀಡಲಾಗದೆ.

ಇ) ಖಜಾನೆ–2 ತಂತ್ರಾಂಶಗಳ ಮೂಲಕ ಯೋಜನೆಯ ಅನುದಾನ ಬಿಡುಗಡೆಗೊಳಿಸಲಾಗುತ್ತಿದ್ದು, ಖಜಾನೆ–2ರಲ್ಲಿ ಮುಂಗಡ ಹಣ ಪಾವತಿಗೆ ಅವಕಾಶವಿರುವುದಿಲ್ಲ.

ಅಂಗನವಾಡಿ ಕೇಂದ್ರಗಳಲ್ಲಿ ವಿತರಿಸುವ ಕೋಳಿಮೊಟ್ಟೆ ಖರೀದಿಗೆ ಸಂಬಂದಿಸಿದಂತೆ ಕಾಲಕಾಲಕ್ಕೆ ಅನುದಾನವನ್ನು ಸಂಬಂಧಪಟ್ಟ ತಾಲ್ಲೂಕು ಪಂಚಾಯಿತಿಗಳ ಮೂಲಕ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿಗೆ ಮರು ಹಂಚಿಕೆಗೊಳಿಸಲಾಗುತ್ತಿದೆ. ಮರುಹಂಚಿಕೆಗೊಂಡ ಅನುದಾನದಲ್ಲಿ ಫಲಾನುಭವಿಗಳಿಗೆ ಮೊಟ್ಟೆ ಖರೀದಿಸಲು ಅಗತ್ಯವಿರುವ ಹಣವನ್ನು ಬಾಲವಿಕಾಸ ಸಮಿತಿಯ ಜಂಟಿ ಖಾತೆಗೆ ಜಮೆ ಮಾಡಿ ಸ್ಥಳೀಯವಾಗಿ ಮೊಟ್ಟೆ ಖರೀದಿಸಿ ಫಲಾನುಭವಿಗಳಿಗೆ ವಿತರಿಸಲಾಗುತ್ತಿದೆ.

ಈ) ಅನ್ವಯಿಸುವುದಿಲ್ಲ.

**ದಿನಾಂಕ: 10–3–2021 – ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1491: ಬಾಲ್ಯವಿವಾಹ ತಡೆ ಕುರಿತು– ಶ್ರೀ ಸುಬ್ಬಾರೆಡ್ಡಿ (ಬಾಗೇಪಲ್ಲಿ)**

ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗು ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ಸಚಿವರು ದಯವಿಟ್ಟು ಇವುಗಳಿಗೆ ಉತ್ತರಿಸುವರೇ:

ಅ) ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಲ್ಲಿ ದಾಖಲಾಗಿರುವ ಬಾಲ್ಯವಿವಾಹ ಪ್ರಕರಣಗಳು ಎಷ್ಟು (ಪೂರ್ಣ ವಿವರ ನೀಡುವುದು);

ಆ) ಈ ಕ್ಷೇತ್ರದಲ್ಲಿ ಬಾಲ್ಯವಿವಾಹ ಪ್ರಕರಣಗಳನ್ನು ತಡೆಯಲು ಅಧಿಕಾರಿಗಳು ವಿಫಲರಾಗಿರುವುದು ನಿಜವೇ; (ಕಾರಣಗಳೇನು)

ಇ) ಬಾಗೇಪಲ್ಲಿ ಕ್ಷೇತ್ರದಲ್ಲಿ ಬಾಲ್ಯವಿವಾಹಗಳನ್ನು ತಡೆಯಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; (ವಿವರ ನೀಡುವುದು)

ಈ) ಅಧಿಕಾರಿಗಳು ದಕ್ಷತೆಯಿಂದ ಕೆಲಸ ಮಾಡಿದ್ದಲ್ಲಿ ಬಾಲ್ಯವಾಹಗಳನ್ನು ತಡೆಯಲು ಸಾಧ್ಯವಿಲ್ಲವೇ;

ಉ) ಬಾಲ್ಯವಿವಾಹ ತಡೆಯಲು ವಿಫಲರಾದ ಅಧಿಕಾರಿಗಳ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಂಡಿದೆ? (ವಿವರ ನೀಡುವುದು)

**ಉತ್ತರಿಸಿದವರು ಮಾನ್ಯ ಸಚಿವರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗು ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ**

ಅ) ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಲ್ಲಿ ದಾಖಲಾಗಿರುವ ಬಾಲ್ಯವಿವಾಹ ಪ್ರಕರಣಗಳ ಮಾಹಿತಿಯನ್ನು ಒದಗಿಸಲಾಗಿದೆ;

| ವರ್ಷ | ಸ್ವೀಕರಿಸಿದ ದೂರುಗಳು | ತಡೆದ ಪ್ರಕರಣಗಳು | ನಡೆದ ಪ್ರಕರಣಗಳು | ಎಫ್.ಐ.ಆರ್. ದಾಖಲಾಗಿರುವುದು |
|---|---|---|---|---|
| 2018–19 | 7 | 6 | 1 | 1 |
| 2019–20 | 57 | 47 | 10 | 8 |
| 2020–21 | 51 | 48 | 3 | 3 |
| | **115** | **101** | **14** | **12** |

ಆ) ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದಲ್ಲಿ ಬಾಲ್ಯವಿವಾಹ ಪ್ರಕರಣಗಳನ್ನು ತಡೆಯಲು ಗ್ರಾಮ ಪಂಚಾಯತ್ ಮಟ್ಟದ ಬಾಲ್ಯವಿವಾಹ ನಿಷೇಧಾಧಿಕಾರಿಗಳು ಹಾಗು ಜಿಲ್ಲಾ ಮಟ್ಟದ ಅಧಿಕಾರಿಗಳು ಬಾಲ್ಯವಿವಾಹವನ್ನು ತಡೆಯಲು ತಮ್ಮ ದೈನಂದಿನ ಕೆಲಸದ ಜೊತೆಗೆ ಹೆಚ್ಚುವರಿಯಾಗಿ ಇತರೆ ಸಂಬಂಧಪಟ್ಟ ಭಾಗೀದಾರ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಕಾರ್ಯನಿರ್ವಹಿಸುತ್ತಿದ್ದಾರೆ.

ಇ) ಬಾಗೇಪಲ್ಲಿ ಕ್ಷೇತ್ರದಲ್ಲಿ ಬಾಲ್ಯವಿವಾಹಗಳನ್ನು ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮದ ಮಾಹಿತಿಯನ್ನು ಅನುಬಂಧ–2ರಲ್ಲಿ ನೀಡಲಾಗಿದೆ.

ಈ) ಬಾಲ್ಯವಿವಾಹವನ್ನು ತಡೆಯಲು ಬಾಗೇಪಲ್ಲಿ ತಾಲ್ಲೂಕಿನಲ್ಲಿ ಮಾನ್ಯ ತಹಶೀಲ್ದಾರ್‌ರವರಿಂದ ಹಿಡಿದು ಗ್ರಾಮ ಮಟ್ಟದ ಬಾಲ್ಯವಿವಾಹ ನಿಷೇಧಾಧಿಕಾರಿಗಳಾದ ಗ್ರಾಮ ಲೆಕ್ಕಿಗರು, ಶಾಲಾ ಮುಖ್ಯೋಪಾಧ್ಯಾಯರು, ತಾಲ್ಲೂಕಿನಲ್ಲಿ ದಕ್ಷತೆಯಿಂದ ಕಾರ್ಯನಿರ್ವಹಿಸುತ್ತಿದ್ದಾರೆ.

ಉ) ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಲ್ಲಿ 115 ದೂರು ಸ್ವೀಕೃತವಾಗಿದ್ದು, ಅದರಲ್ಲಿ 101 ಬಾಲ್ಯವಿವಾಹಗಳನ್ನು ತಡೆಹಿಡಿಯಲಾಗದೆ.

**ದಿನಾಂಕ: 17–3–2021 – ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2534: ಶಾಲಾ ಮಕ್ಕಳ ಸಾರಿಗೆ ವ್ಯವಸ್ಥೆ – ಶ್ರೀ ರವೀಂದ್ರ ಶ್ರೀಕಂಠಯ್ಯ (ಶ್ರೀರಂಗಪಟ್ಟಣ)**

ಮಾನ್ಯ ಸಾರಿಗೆ ಇಲಾಖೆ ಸಚಿವರು ದಯವಿಟ್ಟು ಇವುಗಳಿಗೆ ಉತ್ತರಿಸುವರೇ:

ಅ) ಶ್ರೀರಂಗಪಟ್ಟಣ ತಾಲ್ಲೂಕಿನ ವಿವಿಧ ಗ್ರಾಮಗಳ ಶಾಲಾ–ಕಾಲೇಜು ಮಕ್ಕಳಿಗೆ ಬಸ್ ಸೌಲಭ್ಯ ದೊರೆಯದೆ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ; ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಜಿಲ್ಲಾ ಕೇಂದ್ರ ಹಾಗು ತಾಲ್ಲೂಕಿನ ಕೇಂದ್ರದ ಶಾಲೆಗಳಿಗೆ ಹೋಗಿ ಬರಲು ಸರ್ಕಾರ ಬಸ್ ಸೌಲಭ್ಯ ಒದಗಿಸುವುದೇ;

ಇ) ಎಲ್ಲಾ ಹಳ್ಳಿಗಳಲ್ಲಿ ಶಾಲಾ ಮಕ್ಕಳು ಗಂಟೆಗಟ್ಟಲೇ ಬಸ್‌ಗಾಗಿ ಕಾಯುವುದನ್ನು ತಪ್ಪಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ? (ವಿವರ ನೀಡುವುದು)

**ಉತ್ತರಿಸಿದವರು ಮಾನ್ಯ ಸಚಿವರು, ಸಾರಿಗೆ ಇಲಾಖೆ**

ಅ) ಶ್ರೀರಂಗಪಟ್ಟಣ ತಾಲ್ಲೂಕು ವ್ಯಾಪ್ತಿಯಲ್ಲಿ ಒಟ್ಟು 91 ಗ್ರಾಮಗಳಿದ್ದು, ಈ ಎಲ್ಲಾ ಗ್ರಾಮಗಳಿಗೂ ಕ.ರಾ.ರ.ಸಾ.ನಿಗಮದಿಂದ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದ್ದು, ಸದರಿ ಸೌಲಭ್ಯವನ್ನು ಎಲ್ಲಾ ಗ್ರಾಮಗಳಲ್ಲಿನ ವಿದ್ಯಾರ್ಥಿಗಳು ಪಡೆಯುತ್ತಿದ್ದಾರೆ.

ಅಲ್ಲದೆ, ಈ ಕ್ಷೇತ್ರದ ವ್ಯಾಪ್ತಿಯಲ್ಲಿ ಖಾಸಗಿ ಸಾರಿಗೆಗಳ ಪ್ರವರ್ತಕರು ಸಹ ತಮ್ಮ ಸಾರಿಗೆಗಳನ್ನು ಕಾರ್ಯಾಚರಿಸುತ್ತಿದ್ದಾರೆ.

ಆ) ಪ್ರಸ್ತುತ ನಿಗಮದ ವತಿಯಿಂದ ಕಲ್ಪಿಸಿರುವ ಸಾರಿಗೆ ಸೌಲಭ್ಯ ಅವಶ್ಯಕತೆಗೆ ಅನುಗುಣವಾಗಿದೆ.

ಕೋವಿಡ್–19ರ ಹಿನ್ನಲೆಯಲ್ಲಿ ವಿಧಿಸಲಾಗಿದ್ದ ಲಾಕ್‌ಡೌನ್ ನಿಂದಾಗಿ ಸಾರಿಗೆಗಳ ಕಾರ್ಯಾಚರಣೆ ಸ್ಥಗಿತಗೊಳಿಸಲಾಗಿತ್ತು. ಲಾಕ್‌ಡೌನ್ ತೆರವುಗೊಳಿಸಿದ ನಂತರ ಕಡಿಮೆ ಸಂಖ್ಯೆಯಲ್ಲಿ ಪ್ರಯಾಣಿಕರಿದ್ದು, ಪ್ರಸ್ತುತ ಹಲವಾರು ಶಾಲೆಗಳು ಪ್ರಾರಂಭವಾಗದಿರವುದರಿಂದ, ಪ್ರಯಾಣಿಕರ ಲಭ್ಯತೆ/ದಟ್ಟಣೆಗನುಗುಣವಾಗಿ ಸಾರಿಗೆಗಳನ್ನು ಕಾರ್ಯಾಚರಣೆಗೊಳಿಸಲಾಗುತ್ತಿದ್ದು, ಹಂತಹಂತವಾಗಿ ಸಾರಿಗೆಯನ್ನು ಹೆಚ್ಚಿಸಿ ಕಾರ್ಯಾಚರಣೆ ಮಾಡಲಾಗುತ್ತಿದೆ.

ಇ) ಶ್ರೀರಂಗಪಟ್ಟಣ ತಾಲ್ಲೂಕು ವ್ಯಾಪ್ತಿಯಲ್ಲಿ ವಿದ್ಯಾರ್ಥಿಗಳ ಹಾಗು ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ನಿಗಮದವತಿಯಿಂದ 165 ಸುತ್ತುವಳಿಗಳಲ್ಲಿ ಸಾರಿಗೆ ಸೌಲಭ್ಯ ಕಲ್ಪಿಸಲಾಗಿರುತ್ತದೆ. ಸದರಿ ಸಾರಿಗೆಗಳು ಅವಶ್ಯಕತೆಗೆ ಅನುಗುಣವಾಗಿದ್ದು, ವಿದ್ಯಾರ್ಥಿಗಳು ಇದರ ಅನುಕೂಲತೆಯನ್ನು ಪಡೆದುಕೊಳ್ಳುತ್ತಿರುತ್ತಾರೆ.

**ದಿನಾಂಕ: 17–3–2021 – ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2537: ಬಾಲಕಾರ್ಮಿಕರ ಕುರಿತು – ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ–ಕಾಂಗ್ರೆಸ್)**

ಮಾನ್ಯ ಕಾರ್ಮಿಕ ಇಲಾಖೆ ಸಚಿವರು ದಯವಿಟ್ಟು ಇವುಗಳಿಗೆ ಉತ್ತರಿಸುವರೇ:

ಅ) ಕಾರ್ಮಿಕ ವರ್ಗದವರು, ವಲಸೆ ಕಾರ್ಮಿಕರು ಸೇರಿದಂತೆ ವಿವಿಧ ವರ್ಗದ ಮಕ್ಕಳನ್ನು ದುಡಿಮೆಗೆ ಒಳಪಡಿಸುವ ಮೂಲಕ ಶಿಕ್ಷಣ, ಆರೋಗ್ಯ, ಪೌಷ್ಟಿಕ ಆಹಾರ ಮತ್ತಿತರ ಸೌಲಭ್ಯಗಳಿಂದ ವಂಚಿತರಾಗುತ್ತಿರುವುದನ್ನು ಗಮನಿಸಿ ಅವರ ಸುರಕ್ಷತೆಗಾಗಿ ಇಲಾಖೆ ಕೈಗೊಂಡ ಕ್ರಮಗಳೇನು;

ಆ) ಚಿಕ್ಕ ಬಾಲಕ/ಬಾಲಕಿಯರು ದುಡಿಮೆಗೊಳಗಾಗದಂತೆ ಬಡವರ್ಗದ ಮಕ್ಕಳನ್ನು ಗುರುತಿಸಿ ಅವರಿಗೆ ಯೋಜನಾ ಸೌಲಭ್ಯಗಳನ್ನು ನೀಡುವಲ್ಲಿ ಇಲಾಖೆಯವರು ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು;

ಇ) ಮಕ್ಕಳ ಸಮಗ್ರ ವಿಕಾಸಕ್ಕೆ ಹಾಗು ವಿಶೇಷತಃ ಕೂಲಿ ಕಾರ್ಮಿಕರು ಮತ್ತಿತರ ಬಡವರ್ಗದ ಕುಟುಂಬಗಳಲ್ಲಿನ ಮಕ್ಕಳು ಯೋಜನಾ ಸೌಲಭ್ಯಗಳನ್ನು ಪಡೆಯಲು ಅನುಕೂಲವಾಗುವಂತೆ ಪಂಚಾಯತ್ ಮಟ್ಟದಿಂದಲೇ ಸಮೀಕ್ಷೆ ನಡೆಸಿ ವಿವರಗಳನ್ನು ಪಡೆಯುವ ಬಗ್ಗೆ ಇಲಾಖೆಯು ಜರುಗಿಸುತ್ತಿರುವ ಕ್ರಮಗಳೇನು? (ವಿವರ ನೀಡುವುದು)

**ಉತ್ತರಿಸಿದವರು ಮಾನ್ಯ ಕಾರ್ಮಿಕ ಸಚಿವರು, ಕರ್ನಾಟಕ ಸರ್ಕಾರ**

ಅ) ಮಕ್ಕಳ ರಕ್ಷಣಾ ನಿರ್ದೇಶನಾಲಯ: ಕಾರ್ಮಿಕ ಇಲಾಖೆಯಿಂದ ದುಡಿಮೆಗೊಳಪಟ್ಟು ಮಕ್ಕಳನ್ನು ರಕ್ಷಿಸಿದ ಸಂದರ್ಭದಲ್ಲಿ ಪಾಲನೆ ಮತ್ತು ರಕ್ಷಣೆ ಅಗತ್ಯವಿರುವ ಮಕ್ಕಳನ್ನು ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ–2015ರಡಿ ಮಕ್ಕಳ ಕಲ್ಯಾಣ ಸಮಿತಿ ಮುಂದೆ ಹಾಜರುಪಡಿಸಿ, ಸಮಿತಿ ನಿರ್ದೇಶನದಂತೆ ಮಕ್ಕಳನ್ನು ಅವರ ಪೋಷಕರ ವಶಕ್ಕೆ ಒಪ್ಪಿಸಲಾಗುವುದು ಅಥವಾ ಅಗತ್ಯವಿದ್ದಲ್ಲಿ ಮಕ್ಕಳ ಪಾಲನಾ ಕೇಂದ್ರಗಳಲ್ಲಿ ಪುನರ್ವಸತಿಯನ್ನು ಒದಗಿಸಲಾಗುವುದು.

**ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ:**

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ವತಿಯಿಂದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳಲ್ಲಿ ಕೆಲಸ ಮಾಡುವ ಕಾರ್ಮಿಕರನ್ನು ಮಂಡಳಿಯ ಫಲಾನುಭವಿಗಳನ್ನಾಗಿ ನೋಂದಾಯಿಸಿಕೊಂಡು ಅವರ ಮಕ್ಕಳ ಶಿಕ್ಷಣ, ಆರೋಗ್ಯ, ಪೌಷ್ಟಿಕ ಆಹಾರ ಮತ್ತು ಇತರೆ ಸೌಲಭ್ಯಗಳಿಗಾಗಿ ರೂಪಿಸಿರುವ ಯೋಜನೆಗಳ ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಆ) ಕಾರ್ಮಿಕ ಇಲಾಖೆಯ ಕರ್ನಾಟಕ ರಾಜ್ಯ ಬಾಲಕಾರ್ಮಿಕ ನಿರ್ಮೂಲನಾ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಜಿಲ್ಲೆಗಳ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿಗಳು ಬಾಲ್ಯಾವಸ್ಥೆ ಮತ್ತು ಕಿಶೋರಾವಸ್ಥೆ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಕೆಲಸಕ್ಕೆ ನಿಯೋಜಿಸಿಕೊಳ್ಳುವುದನ್ನು ಸಂಪೂರ್ಣವಾಗಿ ನಿಷೇಧಿಸಿದೆ ಮತ್ತು 15–18 ವಯಸ್ಸಿನ ಕಿಶೋರಾವಸ್ಥೆಯ ಮಕ್ಕಳು ಅಪಾಯಕಾರಿ ಉದ್ದಿಮೆಗಳಲ್ಲಿ ಕೆಲಸಕ್ಕೆ ನಿಯೋಜಿಸಿಕೊಳ್ಳುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದ್ದು, ಈ ನಿಟ್ಟಿನಲ್ಲಿ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.

ಬಾಲ್ಯವಸ್ಥೆ ಮತ್ತು ಕಿಶೋರಾವಸ್ಥೆ ಮಕ್ಕಳು ದುಡಿಮೆಗೊಳಗಾಗದಂತೆ ಮತ್ತು ಬಾಲಕಾರ್ಮಿಕ ಪದ್ಧತಿಯನ್ನು ತಡೆಯುವ ನಿಟ್ಟಿನಲ್ಲಿ ಎಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿಗಳ ಮೂಲಕ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಮಾಹಿತಿ, ಶಿಕ್ಷಣ ಮತ್ತು ಸಂವಹನ (ಐ.ಇ.ಸಿ.) ಕಾರ್ಯಕ್ರಮಗಳು, ಕಾನೂನು ಅರಿವು–ನೆರವು ಕಾರ್ಯಕ್ರಮಗಳು, ಜಾಥಾ ಹಾಗೂ ಬೀದಿನಾಟಕಗಳ ಆಯೋಜನೆ, ಗೋಡೆ ಬರಹಗಳು ಮತ್ತು ಸ್ಟಿಕರ್‌ಗಳು ಹಾಗು ಕರಪತ್ರಗಳನ್ನು ಹಂಚುವುದರ ಮೂಲಕ ಜನಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.

ಬಾಲ್ಯಾವಸ್ಥೆ ಮತ್ತು ಕಿಶೋರಾವಸ್ಥೆ ಕಾರ್ಮಿಕ ಅಪಾಯಕಾರಿ ಉದ್ದಿಮೆಗಳಲ್ಲಿ ದುಡಿಯುವುದು ಕಂಡುಬಂದಲ್ಲಿ ಕೆಲಸದಿಂದ ಬಿಡಿಸಿ ಯೋಜನೆಯಡಿ ನಡೆಸುವ ವಿಶೇಷ ತರಬೇತಿ ಕೇಂದ್ರಗಳಿಗೆ ಸೇರಿಸಿ, ಸದರಿ ತರಬೇತಿ, ಶಿಷ್ಯವೇತನ, ಆರೋಗ್ಯ ರಕ್ಷಣೆ ಹಾಗು ಮನೋರಂಜನಾ ವ್ಯವಸ್ಥೆಯನ್ನು ಒದಗಿಸಿ ಅವರನ್ನು ಔಪಚಾರಿಕ ಶಿಕ್ಷಣ ವ್ಯವಸ್ಥೆಯಲ್ಲಿ ವಿಲೀನಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಮಕ್ಕಳ ಸಮಗ್ರ ವಿಕಾಸಕ್ಕೆ ಹಾಗು ವಿಶೇಷತಃ ಕೂಲಿ ಕಾರ್ಮಿಕರು ಮತ್ತಿತರ ಬಡವರ್ಗದ ಕುಟುಂಬಗಳಲ್ಲಿನ ಮಕ್ಕಳು ಯೋಜನಾ ಸೌಲಭ್ಯವನ್ನು ಪಡೆಯಲು ಅನುಕೂಲವಾಗುವಂತೆ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿವತಿಯಿಂದ ನೋಂದಣಿ ನವೀಕರಣ ಹಾಗು ಕ್ಲೈಂ ಅರ್ಜಿಗಳನ್ನು ಅಪ್‌ಲೋಡ್ ಮಾಡುವ ಹಾಗು ಅರ್ಜಿಗಳ ತಿರುವಳಿಗಾಗಿ ಪ್ರತ್ಯೇಕವಾದ ತಂತ್ರಾಂಶವನ್ನು ಅಭಿವೃದ್ಧಿಪಡಿಸಲು ಕ್ರಮವಹಿಸಲಾಗುತ್ತಿದೆ. ಅದರಲ್ಲಿ ಕಟ್ಟಡ ಕಾರ್ಮಿಕರು ಹಾಗು ಅವರ ಅವಲಂಬಿತರ ಪೂರ್ಣ ಮಾಹಿತಿಯನ್ನು ನಮೂದಿಸಲು ಅವಕಾಶ ಕಲ್ಪಿಸಲಾಗುವುದು ಹಾಗು ಸದರಿ ತಂತ್ರಾಂಶದಲ್ಲಿ ಅರ್ಜಿದಾರರು ಮಾಹಿತಿ ಅಪ್‌ಲೋಡ್ ಮಾಡಿದ ನಂತರ ಸೌಲಭ್ಯಗಳನ್ನು ನೀಡಲು ಕ್ರಮ ವಹಿಸಲಾಗುವುದು.

**ದಿನಾಂಕ: 18–3–2021 – ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2625: ಶಾಲಾ ಶಿಕ್ಷಣ ಕುರಿತು– ಶ್ರೀಮತಿ ಸೌಮ್ಯರೆಡ್ಡಿ (ಜಯನಗರ–ಕಾಂಗ್ರೆಸ್)**

ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ ಸಚಿವರು ದಯವಿಟ್ಟು ಇವುಗಳಿಗೆ ಉತ್ತರಿಸುವರೇ:

ಅ) ಪ್ರಸಕ್ತ ವರ್ಷದಲ್ಲಿ ಶಾಲಾ–ಕಾಲೇಜುಗಳ ಪ್ರಾರಂಭವಾಗಿದ್ದರೂ ಕೂಡ ಸರ್ಕಾರ ಬಡ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ನೀಡುವ ಸೌಲಭ್ಯವನ್ನು ಒದಗಿಸದಿರಲು ಕಾರಣವೇನು;

ಆ) ಮುಂದಿನ ಶೈಕ್ಷಣಿಕ ವರ್ಷದ ಆಡಳಿತ ಸುಧಾರಣೆ ಕ್ರಮಗಳಾವುವು?

**ಉತ್ತರಿಸಿದವರು ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ ಸಚಿವರು, ಕರ್ನಾಟಕ ಸರ್ಕಾರ**

ಅ) ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಆದರೆ ಗಣಕ ಶಿಕ್ಷಣವನ್ನು ನೀಡಲು 2016–17ನೇ ಸಾಲಿನಿಂದ "ತಂತ್ರಜ್ಞಾನ ಬೆಂಬಲಿತ ಕಲಿಕಾ ಕಾರ್ಯಕ್ರಮ" ವನ್ನು ಅನುಷ್ಠಾನಗೊಳಿಸಲಾಗಿದೆ.

- ಈ ಕಾರ್ಯಕ್ರಮದಲ್ಲಿ 2,351 ಕಂಪ್ಯೂಟರ್ ಪ್ರಯೋಗಾಲಯಗಳನ್ನು ಸ್ಥಾಪಿಸಲಾಗಿದೆ.
- ಸದರಿ ಕಾರ್ಯಕ್ರಮದಲ್ಲಿ 4,669 ಸರ್ಕಾರಿ ಪ್ರೌಢಶಾಲೆಗಳಿಗೆ ಲ್ಯಾಪ್‌ಟಾಪ್ ಮತ್ತು ಪ್ರೊಜೆಕ್ಟರ್‌ಗಳನ್ನು ಒದಗಿಸಲಾಗಿದೆ.
- 26,435 ಶಿಕ್ಷಕರಿಗೆ "ತಂತ್ರಜ್ಞಾನ ಆಧಾರಿತ ಬೋಧನಾ ಕ್ರಮದ ಬಗ್ಗೆ" ತರಬೇತಿಯನ್ನು ನೀಡಲಾಗಿದೆ.
- ಇದುವರೆಗೂ 17,000ಕ್ಕೂ ಅಧಿಕ ಇ–ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸಿ ದೀಕ್ಷ ಪೋರ್ಟನಲ್ಲಿ ಅಳವಡಿಸಲಾಗಿದೆ. ಅಲ್ಲದೆ ಶಾಲೆಗಳಿಗೆ ಒದಗಿಸಲಾಗಿರುವ ಲ್ಯಾಪ್‌ಟಾಪ್ ಮತ್ತು ಕಂಪ್ಯೂಟರ್‌ಗಳಲ್ಲಿಯೂ ಅಳವಡಿಸಲಾಗಿದೆ. ಇ–ಸಂಪನ್ಮೂಲಗಳನ್ನು ಬಳಸಿಕೊಂಡು ಶಿಕ್ಷಕರು ಹೆಚ್ಚು ಆಕರ್ಷಕವಾಗಿ ಕಲಿಕಾ ಚಟುವಟಿಕೆಗಳನ್ನು ನಿರ್ವಹಿಸಲು ಅನುಕೂಲ ಕಲ್ಪಿಸಲಾಗಿದೆ.

ಆದ್ದರಿಂದ ವೈಯಕ್ತಿಕವಾಗಿ ಬಡ/ಇತರೆ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ನೀಡುವ ಅಗತ್ಯತೆ ಕಂಡುಬರುವುದಿಲ್ಲ.

ಆ) ಕೋವಿಡ್–19 ಪರಿಸ್ಥಿತಿಯನ್ನು ಅವಲೋಕಿಸಿ ಶಾಲಾ ಪ್ರಾರಂಭದ ದಿನಾಂಕವನ್ನು ನಿಗಧಿಪಡಿಸುವುದು.

ಬರುವ ಶೈಕ್ಷಣಿಕ ವರ್ಷದಲ್ಲಿ 2ರಿಂದ 10ನೇ ತರಗತಿ ಮಕ್ಕಳಿಗೆ 45 ದಿನಗಳ ದೀರ್ಘಾವಧಿ ಸೇತುಬಂಧ ಕಾರ್ಯಕ್ರಮ ನಡೆಸಿ ಕಲಿಕಾ ಕೊರತೆಯನ್ನು ನೀಗಿಸುವುದು.

6–14 ವರ್ಷದ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ಯೋಜನೆಯಡಿಯಲ್ಲಿ ವಿವಿಧ ಪ್ರೋತ್ಸಾಹದಾಯಕ ಯೋಜನೆಗಳಾದ ಪಠ್ಯಪುಸ್ತಕ ವಿತರಣೆ, ಸಮವಸ್ತ್ರ ವಿತರಣೆ, ಮಧ್ಯಾಹ್ನದ ಬಿಸಿಯೂಟ ಹಾಗು ಇತ್ಯಾದಿಗಳನ್ನು ಸಕಾಲದಲ್ಲಿ ವಿತರಿಸಲು ಸಿದ್ಧತೆಯನ್ನು ಮಾಡಿಕೊಳ್ಳುವುದು.

**ದಿನಾಂಕ: 18–3–2021 – ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 3010: ತಾಯಿ ಮತ್ತು ಮಕ್ಕಳ ಅಸ್ಪತ್ರೆ ಕುರಿತು– ಶ್ರೀ ಶ್ರೀನಿವಾಸಮೂರ್ತಿ (ನೆಲಮಂಗಲ)**

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯವಿಟ್ಟು ಇವುಗಳಿಗೆ ಉತ್ತರಿಸುವರೇ:

ಅ) ನೆಲಮಂಗಲ ಕ್ಷೇತ್ರದಲ್ಲಿ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ನೆಲಮಂಗಲ ಸಾರ್ವಜನಿಕ ಆಸ್ಪತ್ರೆಯ ಆವರಣದಲ್ಲಿ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಸ್ಥಾಪಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ;

ಇ) ತಾಯಿ ಮತ್ತು ಮಕ್ಕಳ ಆಸ್ಪತ್ರೆಗೆ ಪ್ರಸಕ್ತ ಸಾಲಿನಲ್ಲಿ ಅನುದಾನ ಬಿಡುಗಡೆ ಮಾಡಿ ಕಾಮಗಾರಿ ಕೈಗೊಳ್ಳಲಾಗುವುದೇ;

ಈ) ರಾಜ್ಯದಲ್ಲಿ ಇದುವರೆಗೂ ನಿರ್ಮಾಣ ಮಾಡಿದ ತಾಯಿ ಮತ್ತು ಮಕ್ಕಳ ಆಸ್ಪತ್ರೆಗಳ ಸಂಖ್ಯೆ ಎಷ್ಟು; (ತಾಲೂಕುವಾರು ಮಾಹಿತಿ ನೀಡುವುದು)

ಉ) ಪ್ರತಿ ತಾಯಿ ಮತ್ತು ಮಕ್ಕಳ ಆಸ್ಪತ್ರೆ ನಿರ್ಮಾಣಕ್ಕೆ ರಾಜ್ಯ ಸರ್ಕಾರ ನಿಗದಿ ಮಾಡಿದ ಅನುದಾನವೆಷ್ಟು. ಈ ಆಸ್ಪತ್ರೆಯ ನಿರ್ಮಾಣಕ್ಕೆ ಇರುವ ಮಾನದಂಡಗಳೇನು? (ವಿವರ ನೀಡುವುದು).

**ಉತ್ತರಿಸಿದವರು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು, ಕರ್ನಾಟಕ ಸರ್ಕಾರ**

ಅ) ಹೌದು

ಆ) ಪ್ರಸಕ್ತ ಸಾಲಿನಲ್ಲಿ ಸದರಿ ಆಸ್ಪತ್ರೆಗೆ ಅನುಮೋದನೆ ದೊರೆತಿಲ್ಲದ ಕಾರಣ ಕೈಗೊಳ್ಳಲಾಗಿರುವುದಿಲ್ಲ. ಮುಂಬರುವ ಸಾಲಿನಲ್ಲಿ ಅನುದಾನದ ಲಭ್ಯತೆಗನುಗುಣವಾಗಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.

ಇ) ರಾಜ್ಯದಲ್ಲಿ ಇದುವರೆಗೂ 73 ತಾಯಿ ಮತ್ತು ಮಕ್ಕಳ ಆಸ್ಪತ್ರೆಗಳನ್ನು ನಿರ್ಮಾಣ ಮಾಡಲಾಗಿದ್ದು, ತಾಲೂಕುವಾರು ಮಾಹಿತಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಈ) ತಾಯಿ ಮತ್ತು ಮಕ್ಕಳ ಆಸ್ಪತ್ರೆ ನಿರ್ಮಾಣಕ್ಕೆ ರಾಜ್ಯ ಸರ್ಕಾರ ಈ ಕೆಳಕಂಡಂತೆ ಅನುದಾನವನ್ನು ನಿಗದಿಪಡಿಸಲಾಗಿರುತ್ತದೆ:

- 100 ಹಾಸಿಗೆಗಳ ಸಾಮರ್ಥ್ಯದ ಆಸ್ಪತ್ರೆಗೆ ರೂ. 20 ಕೋಟಿಗಳು,
- 60 ಹಾಸಿಗೆಗಳ ಸಾಮರ್ಥ್ಯದ ಆಸ್ಪತ್ರೆಗೆ ರೂ. 15 ಕೋಟಿಗಳು,
- 30 ಹಾಸಿಗೆಗಳ ಸಾಮರ್ಥ್ಯದ ಆಸ್ಪತ್ರೆಗೆ ರೂ. 12 ಕೋಟಿಗಳು

ಉ) ತಾಯಿ ಮತ್ತು ಮಕ್ಕಳ ಆಸ್ಪತ್ರೆ ನಿರ್ಮಾಣ ಮಾಡಲು ಈ ಕೆಳಕಂಡ ಮಾನದಂಡಗಳನ್ನು ವಿಧಿಸಲಾಗಿದೆ.

1) ಕನಿಷ್ಠ 5 ಲಕ್ಷ ಜನಸಂಖ್ಯೆಗೆ Referral Unit ಆಗಿ ಕೆಲಸ ನಿರ್ವಹಿಸಬೇಕು;

2) ಆಸ್ಪತ್ರೆಯಲ್ಲಿ ಶೇಕಡ 70ಕ್ಕಿಂತ ಹೆಚ್ಚಿಗೆ Bed Occupancy Rate ಹೊಂದಿರಬೇಕು.

**ವಿಧಾನಪರಿಷತ್ – ಉತ್ತರಗಳು**

**ದಿನಾಂಕ: 15–2–2021 – ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 565: ಬಾಲ್ಯವಿವಾಹ ಕುರಿತು– ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ ಶಿಕ್ಷಕರ ಕ್ಷೇತ್ರ)**

ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗು ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ಸಚಿವರು ದಯವಿಟ್ಟು ಇವುಗಳಿಗೆ ಉತ್ತರಿಸುವರೇ:

ಅ) ರಾಜ್ಯದಲ್ಲಿ ಬಾಲ್ಯವಿವಾಹ ಪದ್ಧತಿ ನಿಯಮಬಾಹಿರವಾಗಿದ್ದರೂ ಸಹ ಇತ್ತೀಚೆಗೆ ಹಲವಾರು ಪ್ರಕರಣಗಳು ಬೆಳಕಿಗೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಬಾಲ್ಯವಿವಾಹಗಳಿಗೆ ತುತ್ತಾಗಿ ಎಷ್ಟು ಬಾಲಕಿಯರು ವಿಧವೆಯಾಗಿದ್ದಾರೆ:

ಇ) ಅವರುಗಳು ಮರುಮದುವೆಯಾಗಲು ಮುಂದೆ ಬಂದಲ್ಲಿ ಸರ್ಕಾರ ಅವರಿಗೆ ಹೇಗೆ ರಕ್ಷಣೆಯನ್ನು ನೀಡುತ್ತದೆ:

ಈ) ಎಷ್ಟು ಬಾಲ್ಯವಿವಾಹ ಪ್ರಕರಣಗಳನ್ನು ನ್ಯಾಯಾಲಯದಿಂದ ತಡೆಯಾಜ್ಞೆ ಪಡೆದು ನಿಲ್ಲಿಸಲಾಗಿದೆ.

**ಉತ್ತರಿಸಿದವರು ಮಾನ್ಯ ಸಚಿವರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗು ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ**

ಅ) ಬಂದಿದೆ

ಆ) ಬಾಲ್ಯವಿವಾಹಕ್ಕೆ ತುತ್ತಾಗಿ ಯಾವುದೇ ಬಾಲಕಿಯು ವಿಧವೆಯಾಗಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಇ) ಅನ್ವಯಿಸುವುದಿಲ್ಲ

ಈ) ಬಾಲ್ಯವಿವಾಹ ಪ್ರಕರಣಗಳನ್ನು ನ್ಯಾಯಾಲಯದಿಂದ ತಡೆಯಾಜ್ಞೆ ಪಡೆದು ನಿಲ್ಲಿಸಲಾಗಿರುವ ಯಾವುದೇ ಪ್ರಕರಣಗಳು ಇರುವುದಿಲ್ಲ.

**ದಿನಾಂಕ: 11–12–2020 – ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 376: ಪ್ರಧಾನ ಮಂತ್ರಿ ಸುರಕ್ಷಿತ ಮಾತೃತ್ವ ಕುರಿತು– ಶ್ರೀ ರವಿಕುಮಾರ್ ಎನ್. (ವಿಧಾನಸಭೆಯಿಂದ ಚುನಾಯಿತರಾದವರು)**

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯವಿಟ್ಟು ಇವುಗಳಿಗೆ ಉತ್ತರಿಸುವರೇ:

ಅ) ರಾಜ್ಯದಲ್ಲಿ ಕಳೆದ ಒಂದು ವರ್ಷದಲ್ಲಿ ಪ್ರಧಾನಮಂತ್ರಿ ಸುರಕ್ಷಿತ ಮಾತೃತ್ವ ಅಭಿಯಾನದಡಿಯಲ್ಲಿ ಎಷ್ಟು ಗರ್ಭಿಣಿ ಮಹಿಳೆಯರನ್ನು ಪ್ರಸವ ಪೂರ್ವ ಆರೋಗ್ಯ ತಪಾಸಣೆಗೆ ಒಳಪಡಿಸಲಾಗಿದೆ; ಇದರಿಂದ ಎಷ್ಟು ತೀವ್ರ ತಾಪತ್ರಯದ ಗರ್ಭಿಣಿಯನ್ನು ಗುರುತಿಸಲಾಗಿದೆ;

ಆ) ಕಳೆದ ಒಂದು ವರ್ಷದಲ್ಲಿ ಪ್ರಧಾನಮಂತ್ರಿ ಮಾತೃ ವಂದನಾ ಯೋಜನೆಯ ಮೂಲಕ ಎಷ್ಟು ಗರ್ಭಿಣಿ ತಾಯಂದಿರಿಗೆ ಉತ್ತೇಜಕ ಧನ ಸಹಾಯ ನೀಡಲಾಗಿದೆ (ಜಿಲ್ಲಾವಾರು ಮಾಹಿತಿ ನೀಡುವುದು)

ಇ) ಇದರಲ್ಲಿ ರಾಜ್ಯ ಸರ್ಕಾರ ನೀಡಿದ ಅನುದಾನವೆಷ್ಟು;

ಈ) ಇಂದ್ರಧನುಷ್ ಮಿಷನ್ ಮೂಲಕ ಕಾಯಿಲೆಯಿಂದ ರಕ್ಷಣೆ ಪಡೆಯಲು ಕಳೆದ ಒಂದು ವರ್ಷದಲ್ಲಿ ರಾಜ್ಯದ ಎಷ್ಟು ಗರ್ಭಿಣಿ ಸ್ತ್ರೀಯರಿಗೆ ಮತ್ತು ಮಕ್ಕಳಿಗೆ ಲಸಿಕೆಯನ್ನು ನೀಡಲಾಗಿದೆ (ಜಿಲ್ಲಾವಾರು ಮಾಹಿತಿ ನೀಡುವುದು)

**ಉತ್ತರಿಸಿದವರು ಮಾನ್ಯ ಸಚಿವರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ**

ಅ) ಡಿಸೆಂಬರ್–19ರಿಂದ ನವೆಂಬರ್ 2020ರವರೆಗೆ ಪ್ರಧಾನ ಮಂತ್ರಿ ಸುರಕ್ಷಿತ ಮಾತೃತ್ವ ಅಭಿಯಾನದಡಿಯಲ್ಲಿ 1,11,576 ಗರ್ಭಿಣಿ ಮಹಿಳೆಯರನ್ನು ಪ್ರಸವ ಪೂರ್ವ ಆರೋಗ್ಯ ತಪಾಸಣೆಗೆ ಒಳಪಡಿಸಲಾಗಿದೆ. ಇದರಿಂದ 35,206 ಗರ್ಭಿಣಿ ಮಹಿಳೆಯರನ್ನು ತೀವ್ರ ತಾಪತ್ರಯದ ಗರ್ಭಿಣಿಯರೆಂದು ಗುರುತಿಸಲಾಗಿದೆ.

ಆ) ಕಳೆದ ಒಂದು ವರ್ಷದಲ್ಲಿ ಪ್ರಧಾನಮಂತ್ರಿ ಮಾತೃ ವಂದನಾ ಯೋಜನೆಯ ಮೂಲಕ 36,61,05 ಗರ್ಭಿಣಿ ತಾಯಂದಿರಿಗೆ ಸಹಾಯಧನ ನೀಡಲಾಗಿದೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಇ) ಒಟ್ಟು ರೂ. 18,305.27 ಲಕ್ಷಗಳ ಸಹಾಯಧನ ನೀಡಲಾಗಿದ್ದು, ಇದರಲ್ಲಿ ರಾಜ್ಯ ಸರ್ಕಾರದ ಪಾಲು ರೂ. 7,322.11 ಲಕ್ಷಗಳಾಗಿರುತ್ತದೆ.

ಈ) ಮಿಷನ್ ಇಂದ್ರಧನುಷ್ 2.0 ಕಾರ್ಯಕ್ರಮವನ್ನು 4 ಸುತ್ತುಗಳಲ್ಲಿ 2019ರ ಡಿಸೆಂಬರ್ ಹಾಗು 2020ರ ಜನವರಿ, ಫೆಬ್ರವರಿ ಮತ್ತು ಮಾರ್ಚ್ ತಿಂಗಳುಗಳಲ್ಲಿ ನಡೆಸಲಾಗಿದ್ದು ಶೇ. 103ರಷ್ಟು ಗರ್ಭಿಣಿ ಸ್ತ್ರೀಯರಿಗೆ ಶೇ. 98ರಷ್ಟು ಮಕ್ಕಳಿಗೆ ಲಸಿಕೆಯನ್ನು ನೀಡಲಾಗಿದೆ. ಜಿಲ್ಲಾವಾರು ಮಾಹಿತಿ ಅನುಬಂಧ–2ರಲ್ಲಿ ನೀಡಲಾಗಿದೆ.

**ದಿನಾಂಕ: 7–12–2020 – ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 169: ಶಾಲಾ ಶೈಕ್ಷಣಿಕ ಚಟುವಟಿಕೆಗಳ ಕುರಿತು– ಡಾ. ತೇಜಸ್ವಿನಿಗೌಡ. (ವಿಧಾನಸಭೆಯಿಂದ ಚುನಾಯಿತರಾದವರು)**

ಮಾನ್ಯ ಶಿಕ್ಷಣ ಸಚಿವರು ದಯವಿಟ್ಟು ಇವುಗಳಿಗೆ ಉತ್ತರಿಸುವರೇ:

ಅ) ಕೋವಿಡ್–19 ಹಿನ್ನೆಲೆಯಲ್ಲಿ ಕಡ್ಡಾಯವಾಗಿ ಮುಚ್ಚಲ್ಪಟ್ಟಿರುವ ಶಾಲೆಯಿಂದಾಗಿ ಮನೆಯಲ್ಲಿಯೇ ಇರುವ ಮಕ್ಕಳ ಪೋಷಕರ ಮನೋಬಲ ವೃದ್ಧಿಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು;

ಆ) ಪ್ರಸ್ತುತ ಡಿಸೆಂಬರ್ ಹಾಗು ಜನವರಿ ತಿಂಗಳುಗಳು ಅತ್ಯಂತ ಶೀತದಾಯಕವಾಗಿದ್ದು, ಕೋವಿಡ್–19ರ 2ನೇ ಅಲೆಯು ವೇಗವಾಗಿ ಮಾರಣಾಂತಿಕವಾಗಿ ವ್ಯಾಪಿಸುತ್ತಿರುವ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಭವಿಷ್ಯದ ಕುರಿತು ಸರ್ಕಾರ ಕೈಗೊಂಡಿರುವ ನಿರ್ಣಯಗಳೇನು;

ಇ) ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ 01–09ನೇ ತರಗತಿಯವರೆಗೆ ಉತ್ತೀರ್ಣ ಮಾಡಿ ಶೈಕ್ಷಣಿಕ ಉನ್ನತೀಕರಣ ಸೂಕ್ತವೆನಿಸಿದರೂ ಎಸ್.ಎಸ್.ಎಲ್.ಸಿ. ಹಾಗು ಪಿ.ಯು.ಪಿ. ಪರೀಕ್ಷೆಗಳಿಗೆ ಕಡ್ಡಾಯವಾಗಿ ತರಬೇತಿ ಹಾಗು ಪರೀಕ್ಷೆ ಸೂಕ್ತವಾಗಿದ್ದು ಈ ಬಗ್ಗೆ ಸರ್ಕಾರದ ನಿಲುವೇನು?

**ಉತ್ತರಿಸಿದವರು ಮಾನ್ಯ ಸಚಿವರು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖ**

ಅ) ಕೋವಿಡ್–19 ವೈರಾಣು ಹರಡುವಿಕೆ ಹಿನ್ನೆಲೆಯಲ್ಲಿ ನಿಗದಿತ ಕಾರ್ಯಸೂಚಿಯಂತೆ ಶಾಲೆಗಳಲ್ಲಿ ಶೈಕ್ಷಣಿಕ ಚಟುವಟಿಕೆಗಳು ಪ್ರಾರಂಭವಾಗಿರುವುದಿಲ್ಲ.

ವಿದ್ಯಾರ್ಥಿಗಳಿಗೆ ಸ್ವಕಲಿಕಾ ಅವಕಾಶಗಳನ್ನು ಒದಗಿಸುವ ನಿಟ್ಟಿನಲ್ಲಿ ದೂರದರ್ಶನಗಳಿಗೆ ಚಂದನ ವಾಹಿತಿ ಮೂಲಕ ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ದಿನಾಂಕ: 20–7–2020ರಿಂದ ವಿಡಿಯೋ ಪಾಠಗಳನ್ನು ಪ್ರಾರಂಭಿಸಲಾಗಿದೆ. ಚಿಕ್ಕಮಕ್ಕಳಿಗಾಗಿ ಯೂ–ಟ್ಯೂಬ್ ಚಾನೆಲ್‌ನಲ್ಲಿ ಮಕ್ಕಳವಾಣಿ ಕಾರ್ಯಕ್ರಮದಲ್ಲಿ 40ಕ್ಕೂ ಹೆಚ್ಚು ಎಪಿಸೋಡ್‌ಗಳನ್ನು ಪ್ರಸಾರ ಮಾಡಲಾಗಿದೆ. 6–8ನೇ ತರಗತಿ ಮಕ್ಕಳಿಗೆ ವಿಡಿಯೋ ಪಾಠಗಳನ್ನು ಸಿದ್ಧಪಡಿಸಲಾಗಿದ್ದು, ಪ್ರಸಾರ ಪ್ರಾರಂಭಿಸಲಾಗುತ್ತಿದೆ.

ಆ) ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸುವ ದೃಷ್ಟಿಯಿಂದ ಸ್ಥಳೀಯವಾಗಿ ಅವರು ವಾಸಿಸುವ ಗ್ರಾಮಗಳಲ್ಲಿಯೇ ಬಯಲು ಶಾಲೆಗಳನ್ನು 'ವಿದ್ಯಾಗಮ' ಯೋಜನೆಯ ಮೂಲಕ ನಡೆಸಲಾಗಿದೆ. ಈ ಯೋಜನೆಯನ್ನು ಸೂಕ್ತ ಬದಲಾವಣೆಗಳೊಂದಿಗೆ ಮರು ಜಾರಿಗೊಳಿಸಲು ಯೋಜಿಸಲಾಗಿದೆ.

ಇ) ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ತರಗತಿಗಳ ಸೇರಿದಂತೆ ಉನ್ನತ ತರಗತಿಗಳನ್ನು ಪ್ರಾರಂಭಿಸಲು ಇಲಾಖೆ ಸಿದ್ಧತೆ ಮಾಡಿಕೊಂಡಿದೆ ಹಾಗೆಯೇ ಪರೀಕ್ಷೆಗಳನ್ನು ನಡೆಸಲು ಸಹ ಸಿದ್ಧವಿದೆ. ಆರೋಗ್ಯ ಇಲಾಖೆಯ ತಜ್ಞರ ಸಮಿತಿಯ ವರದಿಯ ಆಧಾರದ ಮೇಲೆ ಮುಂದಿನ ಕ್ರಮ ವಹಿಸಲಾಗುವುದು.

KARNATAKA CHILD RIGHTS OBSERVATORY

**ಕರ್ನಾಟಕ ಮಕ್ಕಳ ಹಕ್ಕುಗಳ ನಿಗಾ ಕೇಂದ್ರ:** ಇದರ ಮುಖ್ಯ ಉದ್ದೇಶ ರಾಜ್ಯದಲ್ಲಿರುವ ಎಲ್ಲಾ ಭಾಗೀದಾರರನ್ನು ಒಳಗೊಂಡಿಸಿಕೊಂಡು ಅಂಕಿಅಂಶಗಳು, ವಿಶ್ಲೇಷಣೆ, ಪ್ರಚಾರ ಮತ್ತು ಒತ್ತಡ (ಅವಶ್ಯವಿದ್ದಂತೆ) ಮೊದಲಾದವುಗಳನ್ನು ಒದಗಿಸುವುದರ ಮೂಲಕ ಸರ್ಕಾರ ಮತ್ತು ಸಮುದಾಯಗಳು ಮಕ್ಕಳ ಹಿತದೃಷ್ಟಿಯಿಂದ ವರ್ತಿಸುವಂತೆ ಮಾಡುವುದು.

www.kcro.in

unicef for every child

**ಯುನಿಸೆಫ್:** ಜಗತ್ತಿನ 191 ರಾಷ್ಟ್ರಗಳಲ್ಲಿ ಮಕ್ಕಳ ಉಳಿವು ಮತ್ತು ಅಭಿವೃದ್ಧಿ; ಮೂಲ ಶಿಕ್ಷಣ ಮತ್ತು ಲಿಂಗಸಮಾನತೆ; ಮಕ್ಕಳ ಹಿಂಸೆ ಮತ್ತು ದುರುಪಯೋಗದ ವಿರುದ್ಧ ರಕ್ಷಣೆ, ಮಕ್ಕಳ ಭಾಗವಹಿಸುವಿಕೆ, ಜೀವನ ಕೌಶಲ್ಯ ಆಧಾರಿತ ಶಿಕ್ಷಣವೇ ಮೊದಲಾದ ಮಕ್ಕಳ ಹಕ್ಕುಗಳ ಜಾರಿಗಾಗಿ ಶ್ರಮಿಸುತ್ತಿರುವ ಅಂತಾರಾಷ್ಟ್ರೀಯ ಸಂಸ್ಥೆ.

www.unicef.org

**ಚೈಲ್ಡ್ ರೈಟ್ಸ್ ಟ್ರಸ್ಟ್,** 4606, ಹೈ ಪಾಯಿಂಟ್ 4, ಅರಮನೆ ರಸ್ತೆ, ಬೆಂಗಳೂರು 560 001
ದೂ: 080 22201098; ಇ–ಮೇಲ್ crtindia@yahoo.co.in; website: www.childrightstrust.in